WPP No. SK/MNG/WPP/69 D.O.P - 15th of every month from Udupi HPO
ಬೆಲೆ ರೂ.2.50

ದಶಮಾನೋತ್ಸವ ಸಂಭ್ರಮ

# ಶ್ರೀ ಶಾರದಾ

ಮಾಸಪತ್ರಿಕೆ – 15 ಅಕ್ಟೋಬರ್ 2010

॥ ಧಿಯೋ ಯೋನಃ ಪ್ರಚೋದಯಾತ್ ॥

**ಹೆಬ್ಬಾರ್ ಎಂಟರ್‌ಪ್ರೈಸಸ್**

ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ – 576 101.

ಶುಭ ಸಮಾರಂಭಗಳಿಗೆ ಬೇಕಾಗುವ ಕ್ಯಾಟರಿಂಗ್ ವ್ಯವಸ್ಥೆ, ಶಾಮಿಯಾನ, ಗ್ಯಾಸ್ ಸ್ಟವ್, ಟೇಬಲ್, ಕುರ್ಚಿ, ಪಾತ್ರೆಗಳು ಹಾಗೂ ಇನ್ನಿತರ ಎಲ್ಲಾ ವ್ಯವಸ್ಥೆಗಳನ್ನೂ ಸಕಾಲದಲ್ಲಿ ಒದಗಿಸಲಾಗುವುದು.

ಫೋನ್ : 2531493 (O), 2530851 (R), ಮೊಬೈಲ್ : 94484 37893


Regn.No.KAR/KAN/2000/2758 ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಶಾರದಾನಗರ, ಕುಂಜಿಬೆಟ್ಟು, ಉಡುಪಿ – 576 102. ☎ 2520754

ಸಂಪುಟ-10 ಸಂಚಿಕೆ-10 ಪುಟಗಳು-8 Registered Under No.J/UDP/1260/2009-2011 Dated from 01-12-2008 to 30-11-2011.

ಡಾ। ಎ. ಪಿ.ಕೃಷ್ಣ ಸಾಧನೆಗಳು ಪುಟ-6



ಶ್ರೀ ಕೃಷ್ಣಾಯನ - ಕೆ. ಆತ್ಮಾರಾಮ ಶಾಸ್ತ್ರಿ, ಬೆಂಗಳೂರು ಪುಟ-2



ಅಜಾಮಿಳನ ಕತೆ - ವೈ. ಶಂಕರನಾರಾಯಣ ರಾವ್, ಪಡುಬಿದ್ರಿ ಪುಟ-4



ಶ್ರೀಮತಿ ಕೃಷ್ಣವೇಣಿ ಉತ್ತಮ ಶಿಕ್ಷಕಿ ಪ್ರಶಸ್ತಿ ಪುಟ-6

# ಯಕ್ಷಲೋಕ ದರ್ಶನ–ಶ್ರೀ ಯಕ್ಷದೇವ ಮಿತ್ರ ಕಲಾಮಂಡಳಿ, ಬೆಳುವಾಯಿ







ಕರಾವಳಿ ಕರ್ನಾಟಕದ ಗಂಡುಕಲೆಯೆಂದೇ ಪ್ರಸಿದ್ಧಿ ಪಡೆದ ಯಕ್ಷಗಾನ ಕ್ಷೇತ್ರದಲ್ಲಿ ದುಡಿದ ಹಲವಾರು ಕಲಾವಿದರ ಪೈಕಿ ಉತ್ಸಾಹಿ ತರುಣ ದೇವಾನಂದ ಭಟ್ ಓರ್ವರು. ಯಕ್ಷಗಾನ ಕ್ಷೇತ್ರದಲ್ಲಿ ಇತ್ತೀಚಿನ 12 ವರ್ಷಗಳಿಂದ ವಿಶಿಷ್ಟ ರೀತಿಯ ಸಂಘಟನೆಯೊಂದಿಗೆ ಬೆಳೆದು ಹಲವು ಮಿತ್ರರಿಂದೊಡಗೂಡಿದ ಸಂಸ್ಥೆಯೇ ''ಶ್ರೀ ಯಕ್ಷದೇವ ಮಿತ್ರ ಕಲಾ ಮಂಡಳಿ''. ಯಕ್ಷಗಾನ, ತಾಳಮದ್ದಳೆ, ಚಾವಡಿ ಕೂಟ, ತರಬೇತಿ, ಸಂಗೀತ ವೈಭವ, ವಾಚ್ಯ ವೈಭವ, ದಶಾವಧಾನ, ಸನ್ಮಾನ ಹೀಗೆ ಹಲವಾರು ಕಾರ್ಯಕ್ರಮಗಳೊಂದಿಗೆ ಮೇಳೈಸಿದ ಈ ಕಲಾ ಮಂಡಳಿಯು ತನ್ನ 12ನೇ ವರ್ಷದ ''ಯಕ್ಷಲೋಕದರ್ಶನ'' ಶೀರ್ಷಿಕೆಯಡಿಯಲ್ಲಿ ಮೂಡುಬಿದಿರೆ ಸಮಾಜ ಮಂದಿರದಲ್ಲಿ ತಾ.25-7-2010ರಿಂದ ತಾ.31-7-2010ರ ವರೆಗೆ ಜರಗಿದ ಏಳು ದಿನಗಳ ಕಾರ್ಯಕ್ರಮದಿಂದ ಕಲೋಪಾಸಕರ ಅಭಿಮಾನ ಗರಿಕೆದರಿದಂತಾಯಿತು.

ತಾ.25-7-2010ರಂದು ಮೊದಲಿಗೆ ಶ್ರೀ ಕ್ಷೇತ್ರ ಕಟೀಲಿನ ಶ್ರೀ ದುರ್ಗಾ ಮಕ್ಕಳ ಮೇಳದ ''ಕೃಷ್ಣಲೀಲೆ'' ಪ್ರಸಂಗ, ಚಿಕ್ಕ ಮಕ್ಕಳ ಲೀಲೆ ಬಹಳ ಮುದ್ದಾಗಿತ್ತು. ಮಕ್ಕಳೇ ಶಕಟಾಸುರನ ತಡಪೆ ಹೊತ್ತದ್ದು, ಹೆಣ್ಣು ಮಕ್ಕಳ ಕೃಷ್ಣ, ಗೋಪಿಕೆ ಪಾತ್ರ ದೊಡ್ಡ ಕಲಾವಿದರಿಗೆ ಸರಿ ಎನಿಸಿತು. ಇವರು ಭವಿಷ್ಯದ ಕಲಾವಿದರು ಎಂಬುದರಲ್ಲಿ ಸಂಶಯವಿಲ್ಲ.


ಅಂದಿನ ಸಭಾ ಕಾರ್ಯಕ್ರಮದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳದ ಶ್ರೀ ಹರ್ಷೇಂದ್ರ ಕುಮಾರ್‌ರವರು ದೀಪ ಬೆಳಗಿಸಿ ಉದ್ಘಾಟನೆಗೈದು ಯಕ್ಷಲೋಕ ದರ್ಶನ ಕೃತಿ ಬಿಡುಗಡೆಗೊಳಿಸಿದರು. ವೇದಿಕೆಯಲ್ಲಿ ಕಲಾಬೆಳವಣಿಗೆಯ ಬಗ್ಗೆ ಆತಂಕಪಟ್ಟುಕೊಂಡದ್ದು, ಸುಳ್ಳಾಗಿಸಲೋ ಎಂಬಂತೆ ಕಾಟಿಪಳ್ಳ ಗಣೇಶಪುರದ ಸಿದ್ಧಿ ವಿನಾಯಕ ಮಹಿಳಾ ಮಂಡಳಿಯವರಿಂದ ಯಕ್ಷಗಾನ ''ರಾಣಿ ಶಶಿಪ್ರಭೆ'' ವೀರರಸ ಪ್ರಧಾನವಾಗಿ ಮೂಡಿಬಂದ ಈ ಪ್ರಸಂಗ ಪುರುಷರಿಗೂ ಸಡ್ಡುಹೊಡೆಯುವಂತಿತ್ತು. ಎಲ್ಲದಕ್ಕೂ ನಿರ್ದೇಶಕ ಗಿರೀಶ ನಾವುಡರ ಪ್ರಯತ್ನ ಶ್ಲಾಘನೀಯ. ಹಿಮ್ಮೇಳದಲ್ಲಿ ಗಂಡು ಪ್ರಸಂಗದಲ್ಲಿ ಹೆಣ್ಣುಗಳನ್ನು ಗಂಡಾಗಿಸಿದ ಕಂಚಿನಕಂಠದ ಹೊಸ ಮೂಲೆ ಗಣೇಶ ಭಟ್ಟರ ಭಾಗವತಿಕೆ, ಶ್ರುತಿಕಂಠ ಭಟ್, ವಿನಯ ಆಚಾರ್ಯರ ಸಾಥಿ ಸಾರ್ಥಕವಾಯಿತು.

ತಾ.26-7-2010ರಂದು ಹಾಸ್ಯಕಲಾವಿದರಿಂದಲೇ ನಡೆದ 'ಶೂರ್ಪನಖಾ ವಿವಾಹ' ತಾಳಮದ್ದಲೆ ಹಿರಿಯ ಭಾಗವತರಾದ ಪದ್ಯಾಣ ಗಣಪತಿ ಭಟ್ಟರ ನಿರ್ದೇಶನ ಹಾಗೂ ಭಾಗವತಿಕೆ ಈ ಹೊಸ ಪ್ರಯೋಗಕ್ಕೆ ಕಳೆ ಕೊಟ್ಟಿತು. ಪಿ.ಟಿ. ಜಯರಾಂ ಭಟ್, ಎಂ.ದೇವಾನಂದ ಇವರಿಗೆ ಸಾಥಿಗಳಾದರು. ತಾಳಮದ್ದಳೆ ಹಾಸ್ಯ ಕಲಾವಿದ ಬೆಳ್ಳಾರೆ ರಾಮ ಜೋಯಿಸರ ರಾವಣ ಇಡೀ ಕೂಟವನ್ನು ಹಾಸ್ಯದಲ್ಲಿ ತುಂಬಬಹುದೆಂದು ತೋರಿಸಿದ ಹಿರಿಯ ಕಲಾವಿದ. ಬಂಟ್ವಾಳ ಜಯರಾಮ ಆಚಾರ್ಯರ 'ವಿದ್ಯುಜ್ಜಿಹ' ಪ್ರೇಕ್ಷಕರು

(3ನೇ ಪುಟಕ್ಕೆ...)

## ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.)

**ಶ್ರೀ ಶಾರದಾ ಮಂಟಪ, ಶಾರದಾನಗರ, ಕುಂಜಿಬೆಟ್ಟು, ಉಡುಪಿ - 576 102**







॥ನಮೋ ದೇವ್ಯೈ ಮಹಾದೇವ್ಯೈ ಶಿವಾಯ್ಯೈ ಸತತಂ ನಮಃ॥

## ಆಮಂತ್ರಣ

ಮಾನ್ಯ ಸಮಾಜ ಬಾಂಧವರೇ,

ಸ್ವಸ್ತಿ! ಶ್ರೀ ವಿಕೃತಿ ನಾಮ ಸಂವತ್ಸರದ ತುಲಾ ಮಾಸ ದಿನ ೩೦ ಸಲುವ ಅಶ್ವಯುಜ ಶುದ ೧ ಯು, ತಾ.17-10-2010ನೇ ಆದಿತ್ಯವಾರ

ವಿಜಯದಶಮಿ ದಿನದಂದು

### ಶ್ರೀ ಚಂಡಿಕಾಯಾಗ ಮತ್ತು ಶ್ರೀ ಶಾರದಾ ಪೂಜಾ

ಕಾರ್ಯಕ್ರಮವು ಶ್ರೀ ಶಾರದಾ ಮಂಟಪದಲ್ಲಿ ಜರಗಲಿದೆ. ಸರ್ವರೂ ಬಂಧು-ಬಾಂಧವರೊಡಗೂಡಿ ಆಗಮಿಸಿ, ಪೂರ್ವಾಹ್ನ ಮತ್ತು ಅಪರಾಹ್ನದ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಕಾರ್ಯಕ್ರಮವನ್ನು ಸಂಪನ್ನಗೊಳಿಸಬೇಕೆಂದು ಅಪೇಕ್ಷಿಸುತ್ತೇವೆ.

ಸಿ. ಎಸ್. ರಾವ್, ಅಧ್ಯಕ್ಷರು        ಬಿ. ಕೃಷ್ಣಮೂರ್ತಿ ರಾವ್, ಕಾರ್ಯದರ್ಶಿ

ಹಾಗೂ ಕಾರ್ಯಕಾರಿ ಸಮಿತಿಯ ಸವಿನಯ ಆಮಂತ್ರಣ

ವಿ.ಸೂ. : ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಉದಯಚಂದ್ರ ಪ್ರತಿಭಾ ಪುರಸ್ಕಾರ ವಿತರಿಸಲಾಗುವುದು.

ಸಮಾಜ ಬಾಂಧವರು ಈ ಪ್ರಕಟಣೆಯನ್ನೇ ಆಮಂತ್ರಣ ಎಂದು ತಿಳಿಯಬೇಕಾಗಿ ವಿನಂತಿ.

**ನವರಾತ್ರಿ ಉತ್ಸವದ ಪ್ರಯುಕ್ತ ತಾ.17-10-2010ನೇ ಆದಿತ್ಯವಾರ ಪೂರ್ವಾಹ್ನ ಗಂಟೆ 9.00 ರಿಂದ ಸಂಜೆ 2.00 ಗಂಟೆಯ ವರೆಗೆ ನಮ್ಮ ಸಮಾಜ ಬಾಂಧವರಿಗಾಗಿ ವಿವಿಧ ಸ್ಪರ್ಧೆಗಳು ನಡೆಯಲಿರುವುದು**

**ಶ್ರೀಶಾರದಾ ಹವ್ಯಾಸಿ ಯಕ್ಷ ಕಲಾವಿದರು, ಕುಂಜಿಬೆಟ್ಟು, ಉಡುಪಿ ಇವರಿಂದ ಯಕ್ಷಗಾನ ''ಕಂಸ ದಿಗ್ವಿಜಯ-ಕಂಸ ವಧೆ' ಸಮಯ: ಸಂಜೆ 6-00ರಿಂದ 9-00**

**ಯಕ್ಷಗಾನದ ಪ್ರಾಯೋಜಕರು : ಶ್ರೀ ಗಣೇಶ ಹೆಬ್ಬಾರ್, ಸಿ.ಎ., ಅಂಬಲಪಾಡಿ**

ನಮ್ಮ
ಪ್ರೀತಿಯ
ಓದುಗರಿಗೆ,
ಲೇಖಕರಿಗೆ,
ಜಾಹೀರಾತುದಾರರಿಗೆ,
ಶ್ರೀಶಾರದಾ ವೇದಿಕೆಯ
ಸದಸ್ಯರಿಗೆ ಮತ್ತು
ನಮ್ಮ ಎಲ್ಲಾ
ಸಮಾಜ ಬಾಂಧವರಿಗೆ

**ದೀಪಾವಳಿಯ ಹಾರ್ದಿಕ ಶುಭಾಶಯಗಳು**

ಸಂಪಾದಕ ಮಂಡಳಿ,
ಶ್ರೀಶಾರದಾ ಪತ್ರಿಕೆ

**ಸಂಪಾದಕ ಮಂಡಳಿ**

ವೈ. ಮೋಹನ ರಾವ್
ಎಚ್.ಎನ್. ಶ್ಯಾನುಭಾಗ್
ಪ್ರಕಾಶ್ ರಾವ್ ಕೋಲ್ಪೆ
ಟಿ. ಸುರೇಶ ರಾವ್ ಅಂಬಾಗಿಲು

ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯಗಳು, ಅನಿಸಿಕೆಗಳು ಲೇಖಕರ ಸ್ವಂತ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ ಅಥವಾ ಪ್ರಕಾಶಕರ ಅಭಿಪ್ರಾಯವಾಗಿರಬೇಕಾಗಿಲ್ಲ.

ಪತ್ರಿಕೆಯಲ್ಲಿ ಪ್ರಕಟವಾದ ಲೇಖನಗಳು ಅಥವಾ ಇತರ ಯಾವುದೇ ವಿಷಯಗಳ ಬಗ್ಗೆ ಅನಿಸಿಕೆಗಳನ್ನು ವಾಚಕರು ನಿಸ್ಸಂಕೋಚವಾಗಿ ಪತ್ರ ಮುಖೇನ ಸಂಪಾದಕ ಮಂಡಳಿಗೆ ತಿಳಿಸಬಹುದು.

-ಸಂ.

## ಚಿಂತನ

ಚಕ್ರಾಧೀಶ್ವರನೆನಿಸಿದ ನಹುಷ ಮಹಾರಾಜ, ಇಂದ್ರ ಪದವಿಗೇರಲು ಬಹಳಷ್ಟು ಶ್ರಮಿಸಿದ. ದೇವತೆಗಳನ್ನು, ಭೂಮಿಜರನ್ನು ತನ್ನವರನ್ನಾಗಿಸಿಕೊಂಡು, ಶತಯಾಗವನ್ನೂ ಮಾಡಿ ಸ್ವರ್ಗದ ಸಿಂಹಾಸನವನ್ನೇರಿದ. ಆದರೆ ''ನಡೆದು ಬಂದ ದಾರಿಯಾದ ಕಾಲು ಸೇತುವೆಯನ್ನೇ ಮರೆಯುವಂತೆ'' ಉನ್ನತ ಸ್ಥಾನಕ್ಕೇರಿ ಮದದಿಂದ ವರ್ತಿಸಿದ. ಸ್ವರ್ಗದರಸಿ ಶಚಿ ದೇವಿಯನ್ನು ಸೇರುವ ಬಯಕೆ ಉದ್ಭವಿಸಿ, ಅಹಂಕಾರ ತೋರಿದ. ತಾನು ಶಚಿ ದೇವಿಯ ಅಂತಃಪುರಕ್ಕೆ ನಡೆದು ಹೋಗುವುದಲ್ಲ, ತನ್ನನ್ನು ಮಹಾತ್ಮರಾದ ಸಪ್ತರ್ಷಿಗಳೇ ಮೇನೆಯಲ್ಲಿ ಹೊತ್ತು ಶಚಿದೇವಿಯಲ್ಲಿಗೆ ತಲುಪಿಸಬೇಕೆಂದು ಆಜ್ಞಾಪಿಸಿದ. ಸಪ್ತರ್ಷಿಗಳಲ್ಲಿ ಒಬ್ಬರಾದ ಅಗಸ್ತ್ಯರ ಕುಳ್ಳಗಿನ ದೇಹ, ವಕ್ರವಾದ ಕಾಲುಗಳಿಂದಾಗಿ ನಡೆಯುವಾಗ ಮೇನೆಯು ಜಗ್ಗಿದಂತಾದಾಗ ಕೋಪಗೊಂಡ ಮದಾಂಧ, ಅಗಸ್ತ್ಯರಿಗೆ ಎಡಕಾಲಿನಿಂದ ಒದೆದ. ಈತನ ಕೃತ್ಯವನ್ನು ಇದುವರೆಗೆ ಸಹಿಸಿಕೊಂಡಿದ್ದ ಮಹಾ ತಪಸ್ವಿಗಳಾದ ಅಗಸ್ತ್ಯರು ತಾಳ್ಮೆ ಕಳೆದುಕೊಂಡು ಆತನನ್ನು ''ಅಜಗರವಾಗು'' ಎಂದು ಶಪಿಸಿದರು.


ಆಗಲೇ ನಹುಷ ಮಹಾರಾಜನಿಗೆ ತನ್ನ ತಪ್ಪಿನ ಅರಿವಾಯಿತು. ಅಲ್ಲದೇ ಮೇನೆಯಿಂದ ಇಳಿದು ಶಾಪ ವಿಮೋಚನೆಗಾಗಿ ಅಗಸ್ತ್ಯರ ಕಾಲುಹಿಡಿದ... ಹೀಗೆ ಒಂದು ಕಥೆಯನ್ನು ನಾವು ಕೇಳುತ್ತೇವೆ.

ವರ್ತಮಾನ ಕಾಲದಲ್ಲಿ ಅಧಿಕಾರಕ್ಕಾಗಿ ಜನ ಎಷ್ಟೊಂದು ಕಷ್ಟಪಡುತ್ತಾರೆ. ನಂತರ ತಮ್ಮ ಗದ್ದುಗೆಯನ್ನು ಅಲಂಕರಿಸುತ್ತಾರೆ. ಅಧಿಕಾರಕ್ಕೆ ಬಂದ ಮೇಲೆ ಆ ಸ್ಥಾನಕ್ಕೇರಲು ತಾನು ಪಟ್ಟ ಶ್ರಮ, ತನಗೆ ಸಹಾಯ ಮಾಡಿದ ಜನ, ಮೊದಲಾದುವುಗಳನ್ನು ಮರೆತು ನಹುಷನಂತೆ ಮದಾಂಧರಾಗಿ ವರ್ತಿಸುವ ಬಹಳಷ್ಟು ಉದಾಹರಣೆ ಕಾಣಬಹುದು.

ಮಂತ್ರಿ ಮಹೋದಯರು, ರಾಜಕಾರಣಿಗಳು, ಸಂಘ ಸಂಸ್ಥೆಗಳ ಅಧ್ಯಕ್ಷರು ಅಥವಾ ಪದಾಧಿಕಾರಿಗಳು, ಈ ವಿಚಾರವನ್ನು ಗಮನದಲ್ಲಿರಿಸಿಕೊಂಡು ತಮ್ಮ ವರ್ತನೆಯನ್ನು ಬದಲಿಸಿಕೊಳ್ಳದಿದ್ದಲ್ಲಿ ನಹುಷನಂತೆಯೇ ಶಾಪಗ್ರಸ್ಥರಾಗುವರೆಂಬುದನ್ನು ನೆನಪಿನಲ್ಲಿರಿಸಿಕೊಳ್ಳುವುದು ಒಳ್ಳೆಯದಲ್ಲವೇ?

# ಶ್ರೀ ಕೃಷ್ಣಾಯನ

## (ಶ್ರೀ ಮದ್ಭಾಗವತಾನುಸಾರಿ)



**- ಕೆ. ಆತ್ಮಾರಾಮ ಶಾಸ್ತ್ರೀ**
**ಬೆಂಗಳೂರು**

(ಹಿಂದಿನ ಸಂಚಿಕೆಯಿಂದ...)

ಶ್ರೀಕೃಷ್ಣಾದಿಗಳು ಯಮುನೆಯ ದಡಕ್ಕೆ ಬಂದರು. ಅವರೆಲ್ಲ ಕೈ, ಕಾಲು, ಮುಖಗಳನ್ನು ತೊಳೆದುಕೊಂಡು ಶುದ್ಧವಾದ ನೀರನ್ನು ಕುಡಿದರು. ಅಕ್ರೂರನು ರಾಮ, ಕೃಷ್ಣರನ್ನು ರಥದಲ್ಲಿ ಕುಳ್ಳಿರಿಸಿ ತಾನು ಬ್ರಹ್ಮಹ್ರದದಲ್ಲಿ ಸ್ನಾನ ಮಾಡಲು ಹೋದನು. ಗಾಯತ್ರೀ ಮಂತ್ರವನ್ನು ಹೇಳುತ್ತಾ ನೀರಿನಲ್ಲಿ ಮುಳುಗಿದಾಗ ಅಲ್ಲಿ ಅವನಿಗೆ ರಾಮ, ಕೃಷ್ಣರು ಕಾಣಿಸಿದರು. ಅವನಿಗೆ ವಿಸ್ಮಯವಾಯಿತು. ಕೂಡಲೆ ಮೇಲಕ್ಕೆದ್ದು ರಥದ ಕಡೆಗೆ ನೋಡಿದನು. ರಾಮ, ಕೃಷ್ಣರು ರಥದಲ್ಲೇ ಇದ್ದರು. ಇದು ತನ್ನ ಭ್ರಮೆಯೆಂದುಕೊಂಡು ಮತ್ತೊಮ್ಮೆ ಮುಳುಗು ಹಾಕಿದನು. ಆಗ ಸಾವಿರ ಹೆಡೆಗಳ ಮಹಾಶೇಷನೂ, ಅವನ ಮೇಲೆ ಪವಡಿಸಿದ ಮಹಾವಿಷ್ಣುವೂ ಕಾಣಿಸಿದರು. ಅಕ್ರೂರನು ಆಶ್ಚರ್ಯಚಕಿತನಾಗಿ ಭಗವಂತನ ಚರಣಗಳಲ್ಲಿ ತಲೆಯಿಟ್ಟನು. ಅನಂತರ ಪರಮೇಶ್ವರನನ್ನು ವಿಧವಿಧವಾಗಿ ಸ್ತೋತ್ರ ಮಾಡಿದನು. ಆಗ ವಿಷ್ಣುವು ಪುನಃ ಕೃಷ್ಣನಾಗಿ ಕಾಣಿಸಿದನು. ಅಕ್ರೂರನು ವಿಸ್ಮಯಪಡುತ್ತಾ, ಸಂಧ್ಯಾವಂದನೆಯನ್ನು ಮುಗಿಸಿ ಬೇಗನೆ ರಥದ ಹತ್ತಿರ ಬಂದು ಹತ್ತಿ ಕುಳಿತನು. ಅನ್ಯಮನಸ್ಕನಾಗಿದ್ದ ಅವನನ್ನು ವಾಸುದೇವನು ಕೇಳಿದನು, ''ನೀವೇನಾದರೂ ಭೂಮಿಯಲ್ಲೊ, ನೀರಿನಲ್ಲೋ, ಆಕಾಶದಲ್ಲೊ ಅದ್ಭುತವಾದುದನ್ನೇನಾದರೂ ನೋಡಿದಿರಾ? ನಿಮ್ಮನ್ನು ನೋಡಿದರೆ ಹಾಗನಿಸುತ್ತದೆ!''. ಅದಕ್ಕೆ ಅಕ್ರೂರನೆಂದನು, ''ಭಗವಂತ, ಮೂರು ಲೋಕಗಳಲ್ಲಿ ನೀನೇ ತುಂಬಿದ್ದೀಯಾ. ನಿನಗಿಂತ ಬೇರೆ ಅದ್ಭುತಸಂಗತಿ ಇರಲು ಸಾಧ್ಯವೇ?'' ಹೀಗೆ ಹೇಳಿ ಗಾಂದಿನಿಯ ಮಗನು (ಅಕ್ರೂರನು) ರಥ ನಡೆಸಿದನು. ಸಾಯಂಕಾಲದ ಹೊತ್ತು ಅವರೆಲ್ಲ ಮಥುರೆಯನ್ನು ಸೇರಿದರು. ನಂದ ಮೊದಲಾದವರು ಮೊದಲೇ ಹೋಗಿ ಮಥುರೆಯ ಉಪವನದಲ್ಲಿ ಇವರನ್ನು ಪ್ರತೀಕ್ಷಿಸುತ್ತಿದ್ದರು. ಕೃಷ್ಣನು ಅಕ್ರೂರನನ್ನು ತನ್ನ ಮನೆಗೆ ಕಳುಹಿಸಿ ತಾನು ಉಪವನದಲ್ಲಿ ಉಳಿದನು. ಅಕ್ರೂರನು ಮೊದಲು ಕಂಸನಿಗೆ ರಾಮ, ಕೃಷ್ಣರ ಆಗಮನದ ಸಮಾಚಾರವನ್ನು ತಿಳಿಸಿ ತಮ್ಮ ಮನೆಗೆ ಹೋದನು.

ಮರುದಿನ ಅಪರಾಹ್ಣ ಬಲರಾಮ, ಕೃಷ್ಣರು ಇತರ ಗೊಲ್ಲ ಬಾಲಕರ ಸಹಿತ ಮಥುರಾ ಪಟ್ಟಣವನ್ನು ನೋಡುವ ಇಚ್ಛೆಯಿಂದ ಅದಕ್ಕೆ ಪ್ರವೇಶ ಮಾಡಿದರು. ಎಲ್ಲಾ ವೈಭವಗಳಿಂದ ಕೂಡಿದ ಮಥುರಾ ನಗರವನ್ನು ವಿಸ್ಮಯದಿಂದಲೂ, ಆನಂದದಿಂದಲೂ ಅವಲೋಕಿಸಿದರು. ಕೃಷ್ಣನು ಮಥುರೆಗೆ ಬಂದ ಸುದ್ದಿಯನ್ನು ಕೇಳಿದ ಪಟ್ಟಣದ ಸ್ತ್ರೀಯರು ಅವನನ್ನು ನೋಡುವ ತವಕದಿಂದ ತಂತಮ್ಮ ಕೆಲಸ ಕಾರ್ಯಗಳನ್ನು ಅಲ್ಲಲ್ಲೇ ಬಿಟ್ಟು ಬೀದಿಯ ಕಡೆಗೆ ಓಡಿಬಂದರು. ಕೆಲವರು ಮಾರ್ಗಗಳ ಬದಿಗಳಲ್ಲೂ, ಕೆಲವರು ತಮ್ಮ ಮನೆ ಬಾಗಿಲಲ್ಲೂ, ಇನ್ನು ಕೆಲವರು ಮಹಡಿಗಳ ಮೇಲೂ ನಿಂತುಕೊಂಡು ಆ ಸುಂದರ ಮೂರ್ತಿಯನ್ನು ನೋಡಿದರು. ಎಷ್ಟು ನೋಡಿದರೂ ಅವರಿಗೆ ತೃಪ್ತಿಯಾಗಲಿಲ್ಲ. ಮಾರ್ಗದಲ್ಲೊಬ್ಬ ಮಡಿವಾಳನು ಬಹು ಬೆಲೆ ಬಾಳುವ ವಸ್ತ್ರಗಳ ಮೂಟೆಯನ್ನು ಹೊತ್ತುಕೊಂಡು ಹೋಗುತ್ತಿದ್ದನು. ಕೃಷ್ಣನು ಅವನಲ್ಲಿ ರಾಜೋಚಿತ ವಸ್ತ್ರಗಳನ್ನು ಕೊಡುವಂತೆ ಯಾಚಿಸಿದನು. ಆಗ ಅಗಸನು ಅಹಂಕಾರದಿಂದ ಕೃಷ್ಣನನ್ನು ಜರಿದನು. ಆಗ ಸಿಟ್ಟಿಗೆದ್ದ ಕೃಷ್ಣನು ಅವನ ತಲೆಗೆ ಹೊಡೆದನು. ಅವನು ಕೆಳಗೆ ಬಿದ್ದನು. ಅದನ್ನು ನೋಡಿ ಅವನ ಅನುಯಾಯಿಗಳು ಹೆದರಿ ಅಲ್ಲಿಂದ ಓಟಕಿತ್ತರು. ರಾಮ, ಕೃಷ್ಣರು ತಮಗಿಷ್ಟವಾದ ಉಡುಪುಗಳನ್ನು ಧರಿಸಿದರು. ಗೊಲ್ಲರ ಹುಡುಗರಿಗೂ ಕೊಟ್ಟರು. ಉಳಿದುದನ್ನು ಅಲ್ಲೇ ಬಿಟ್ಟರು. ಅವರು ಮುಂದೆ ಹೋಗುತ್ತಿರುವಾಗ ಒಬ್ಬ ಸಿಂಪಿಗನು ಎದುರಾದನು. ಅವನು ಆ ತೇಜಸ್ವಿ ಬಾಲಕರು ಬಟ್ಟೆಗಳನ್ನು ಸರಿಯಾಗಿ ಧರಿಸದ್ದನ್ನು ಕಂಡು ಅವುಗಳನ್ನು ಸರಿಪಡಿಸಿದನು. ಆಗ ಅವರು ಆ ಉಡುಪುಗಳಲ್ಲಿ ಅಧಿಕವಾಗಿ ಶೋಭಿಸಿದರು. ಭಗವಂತನು ಆ ಸಿಂಪಿಗನಿಗೆ ಇಹದಲ್ಲಿ ಐಶ್ವರ್ಯಾದಿ ಸುಖಗಳೂ, ಪರದಲ್ಲಿ ಸಾರೂಪ್ಯವೂ ಸಿಗುವಂತೆ ಅನುಗ್ರಹಿಸಿದನು. ಹಾಗೇ ಮುಂದುವರಿದ ಅವರು ಸುದಾಮನೆಂಬ ಮಾಲೆಗಾರನ ಮನೆಯೊಳಗೆ ಹೋದರು. ಸುದಾಮನು ಸಾಷ್ಟಾಂಗ ಮಣಿದು ಅವರನ್ನು ಪಾದ್ಯಾದಿಗಳಿಂದ ಉಪಚರಿಸಿದನು. ರಾಮ, ಕೃಷ್ಣರ ಆಸೆಯಂತೆ ಅವರಿಗೆಲ್ಲ ಅತಿ ಸುಗಂಧಭರಿತ ಹೂವುಗಳ ಮಾಲೆಗಳನ್ನು ತೊಡಿಸಿದನು. ಹೀಗೆ ಅವನೂ ಭಗವಂತನ ಅನುಗ್ರಹಕ್ಕೆ ಪಾತ್ರನಾದನು.

ರಾಜಮಾರ್ಗದಲ್ಲಿ ನಡೆಯುತ್ತಿರುವಾಗ ಒಬ್ಬ ಸುಂದರ ಯುವತಿಯನ್ನು ಸಂಧಿಸಿದರು. ಅವಳು ಸುಂದರಿಯಾಗಿದ್ದರೂ ಕುಬ್ಜೆಯೂ, ವಕ್ರ ಶರೀರೆಯೂ ಆಗಿದ್ದಳು. ಅವಳು ಕೈಯಲ್ಲಿ ಗಂಧದ ಪಾತ್ರೆಯನ್ನು ಹಿಡಿದುಕೊಂಡಿದ್ದಳು. ನಂದ ಕಿಶೋರನು ಅವಳನ್ನು ಕೇಳಿದನು, ''ಸುಂದರಿ, ನೀನು ಯಾರು? ಯಾರಿಗಾಗಿ ಈ ಗಂಧವನ್ನು ಒಯ್ಯುತ್ತಿದ್ದೀ?'' ಅದಕ್ಕವಳು, ''ಸುಂದರ ಬಾಲಕನೆ, ನಾನು ತ್ರಿವಕ್ರೆ. ಕಂಸೇಶ್ವರನ ಪ್ರಿಯದಾಸಿ. ಈ ಗಂಧವನ್ನು ಅವನಿಗಾಗಿ ಕೊಂಡು ಹೋಗುತ್ತಿರುವೆನು. ಆದರೆ ಇಂತಹ ದಿವ್ಯ ಗಂಧವನ್ನು, ಅಂಗರಾಗವನ್ನೂ ಧರಿಸಲು ನಿಮ್ಮಿಬ್ಬರನ್ನು ಬಿಟ್ಟರೆ ಬೇರೆಯಾರೂ ಯೋಗ್ಯರಿಲ್ಲ'' ಎಂದು ಹೇಳಿ ಅದನ್ನು ಅವರಿಗೇ ಸಮರ್ಪಿಸಿದಳು. ಅವರಿಬ್ಬರೂ ಅಂಗರಾಗದ ಲೇಪನದಿಂದ ಮತ್ತೂ ಸುಂದರವಾಗಿ ಬೆಳಗಿದರು. ಭಗವಂತನು ಕುಬ್ಜೆಯನ್ನು ನೇರ್ಪಡಿಸಲು ನಿಶ್ಚಯಿಸಿದನು. ಅವನು ಅವಳ ಕಾಲುಗಳನ್ನು ತನ್ನ ಕಾಲಿನಿಂದ ಒತ್ತಿ ಹಿಡಿದು ತನ್ನ ಬಲಗೈಯ ಎರಡು ಬೆರಳುಗಳಿಂದ ಅವಳ ಗಲ್ಲವನ್ನೆತ್ತಿದ್ದನು. ಏನಾಶ್ಚರ್ಯ? ಅವಳ ಡೊಂಕು ಶರೀರ ನೆಟ್ಟಗಾಯಿತು. ಮೊದಲೇ ಸುಂದರಿಯಾಗಿದ್ದ ಅವಳು ಈಗ ಅತ್ಯಂತ ಚೆಲುವೆಯಾದಳು. ಅವಳು ಕೃಷ್ಣನ ಉತ್ತರೀಯದ ತುದಿಯನ್ನು ಜಗ್ಗಿ ನಸುನಗುತ್ತ ತನ್ನ ಮನೆಗೆ ಆಹ್ವಾನಿಸಿದಳು. ಕಷ್ಣನು ತನ್ನ ಕೆಲಸ ಮುಗಿದ ಮೇಲೆ ಬರುವುದಾಗಿ ಆಶ್ವಾಸನೆಯಿತ್ತನು.

ದಾರಿಯಲ್ಲಿ ವ್ಯಾಪಾರಿಗಳ ಕಾಣಿಕೆಗಳನ್ನು ಸ್ವೀಕರಿಸುತ್ತ ಅವರೆಲ್ಲ ಧನುರ್ಯಜ್ಞ ನಡೆಯುವ ಸ್ಥಳಕ್ಕೆ ಹೋದರು. ಅಲ್ಲಿ ಇಂದ್ರನ ಬಿಲ್ಲಿಗೆ ಸಮಾನವಾದ ಒಂದು ಬಿಲ್ಲನ್ನು ನೋಡಿದರು. ಶ್ರೀಕೃಷ್ಣನಿಗೆ ಅದನ್ನೆತ್ತಿಕೊಳ್ಳುವ ಆಸೆಯಾಯಿತು. ಅದರ ರಕ್ಷಕರಾದ ರಾಕ್ಷಸರು ತಡೆಯುತ್ತಿದ್ದರೂ ಅವರನ್ನೆಲ್ಲ ತಳ್ಳಿ ಕೃಷ್ಣನು ಬಿಲ್ಲನ್ನೆತ್ತಿ, ಹೆದೆಯೇರಿಸಿ ಮಧ್ಯದಲ್ಲಿ ಮುರಿದೇಬಿಟ್ಟನು. ಆಗ ಭಯಂಕರ ಶಬ್ದವಾಯಿತು. ಆ ಶಬ್ದಕ್ಕೆ ಊರಿಗೆ ಊರೇ ನಡುಗಿತು. ಕಂಸನೂ ಬೆಚ್ಚಿಬಿದ್ದನು. ಆಗ ಅಲ್ಲಿದ್ದ ರಕ್ಕಸರೆಲ್ಲ ರಾಮ, ಕೃಷ್ಣರನ್ನು ಸುತ್ತುವರಿದು ಅವರನ್ನು ಕೊಲ್ಲಲು ಮುಂದಾದರು. ಆಗ ರಾಮ, ಕೃಷ್ಣರು ಆ ಬಿಲ್ಲಿನ ತುಂಡುಗಳಿಂದಲೇ ಹೊಡೆದು ಅವರನ್ನು ಯಮಸದನಕ್ಕಟ್ಟಿದರು. ಅನಂತರ ಯಜ್ಞಶಾಲೆಯಿಂದ ಹೊರಟು ಮಥುರಾ ನಗರದ ಸೊಬಗನ್ನು ವೀಕ್ಷಿಸುತ್ತಾ ಮುನ್ನಡೆದರು. ಸಾಯಂಕಾಲದ ಹೊತ್ತು ಅವರೆಲ್ಲ ತಮ್ಮ ಬೀಡಿಗೆ (ಉಪವನಕ್ಕೆ) ಮರಳಿದರು. ರಾತ್ರಿಯನ್ನು ಅಲ್ಲೇ ಸುಖವಾಗಿ ಕಳೆದರು. (ಮುಂದುವರಿಯುವುದು)

## ಹೊಸ ಬೆಳಕು

**ನಲ್ನುಡಿ :**

**ಪ್ರಸೀದ ಭಗವತ್ಯಂಬ ಪ್ರಸೀದ ಭಕವತ್ಸಲೇ ।**
**ಪ್ರಸಾದಂ ಕುರು ಮೇ ದೇವಿ ದುರ್ಗೇದೇವಿ ನಮೋಽಸ್ತುತೇ ॥**

ಅಂದರೆ ತಾಯಿ, ಭಗವತಿ, ಭಕ್ತರಲ್ಲಿ ವಾತ್ಸಲ್ಯವುಳ್ಳ ದೇವಿಯೇ, ನನಗೆ ಅನುಗ್ರಹ ಮಾಡು. ದುರ್ಗೆ ನಿನಗೆ ನಮಸ್ಕರಿಸುತ್ತೇನೆ.

**ಪುಸಕ ಪರಿಚಯ :**

''ತುಳುನಾಡು''
*ಲೇಖಕರು :*
ಡಾ। ಪಾದೂರು ಗುರುರಾಜ ಭಟ್
*ಪ್ರಕಾಶಕರು :*
ಡಾ। ಪಾದೂರು ಗುರುರಾಜ ಭಟ್ ಮೆಮೋರಿಯಲ್ ಟ್ರಸ್ಟ್ (ರಿ.), ಉಡುಪಿ
*ಬೆಲೆ :* ರೂ.200/-

ಡಾ। ಪಾದೂರು ಗುರುರಾಜ ಭಟ್ ಅವರು ತನ್ನ ಹಿಂದಿನ ಡಾ। ಸಾಲೆತೂರ್‌ರವರ ಕೃತಿಯನ್ನು ಕೂಲಂಕಶವಾಗಿ ವಿಮರ್ಶೆಗೊಡ್ಡಿದ್ದಲ್ಲದೆ, ಕರಾವಳಿಯ, ತುಳುನಾಡಿನ ಸಾಂಸ್ಕೃತಿಕ-ಧಾರ್ಮಿಕ ಇತಿಹಾಸದ ಪ್ರವರ್ತಕರಲ್ಲಿ ''ಡಾ। ಗುರುರಾಜ ಭಟ್ಟ''-ಎನ್ನುವ ಹೆಸರು ಢಾಳವಾಗಿ ಮೂಡಿಬರುವಂತೆ ಮಾಡಿದರು. ಕರ್ನಾಟಕ ಕರಾವಳಿಯ 'ಇತಿಹಾಸ' ಮತ್ತು 'ಗುರುರಾಜ ಭಟ್ಟರು' ಇವೆರಡೂ ಅನನ್ಯವೆನ್ನುವ ಛಾಪನ್ನು ಮೂಡಿಸಿ (1978)ರಲ್ಲಿ ಕಣ್ಮರೆಯಾದರು-ಕೃತಿಯ ಬೆನ್ನುಡಿ.

"ಡಾ। ಗುರುರಾಜ ಭಟ್ಟರು ಗತಿಸಿದ ದಶಕಗಳ ಬಳಿಕ, ಅವರ ಹೆಸರು ಮಾತ್ರ ಇತಿಹಾಸವಾಗಿ ಉಳಿಯಬಾರದು, ಅವರ ಕೃತಿಗಳಲ್ಲಿ ಮೂಡಿಬಂದ ಜ್ಞಾನಸಂಪತ್ತು ಜೀವಂತವಾಗಿ ಉಳಿಯಬೇಕೆನ್ನುವ ಉದ್ದೇಶದಿಂದ, ಅವರ ಕುಟುಂಬದವರೆಲ್ಲಾ ಸೇರಿ ಅವರ ಎಲ್ಲಾ ಕೃತಿಗಳನ್ನು ಮತ್ತು ಮುದ್ರಿಸಿ ಸಮಾಜಕ್ಕೆ ಲಭ್ಯವಾಗಿಸುವ ಉದ್ದೇಶದಿಂದ ಒಂದು ವಿಶ್ವಸ್ಥ ಮಂಡಳಿಯನ್ನು ಸ್ಥಾಪಿಸಿದ್ದಾರೆ. ಈ ಸಂಸ್ಥೆಯಿಂದ ಹೊರತರುತ್ತಿರುವ ಮೊದಲ ಕೃತಿ'' ಎಂದು ಕೃತಿಯ ಪ್ರಕಾಶಕರಾದ ಪ್ರೊ। ಪಾದೂರು ಶ್ರೀಪತಿ ತಂತ್ರಿಯವರು ತಿಳಿಸುತಾರೆ.

ನಾನು ಸಂಶೋಧನಾ ಕಾರ್ಯವನ್ನು ಎರಡು ಮೂರು ವರ್ಷಗಳ ಹಿಂದಕ್ಕೆ ಪ್ರಾರಂಭಿಸಿದಾಗ ಈ ಸ್ಥಾನಿಕ ವರ್ಗದ ವಿಷಯ ಹೆಚ್ಚು ತಿಳಿಯಬೇಕೆಂಬ ಆಶಾಂಕುರವು ಮೂಡಿತು. ತುಳುನಾಡಿನ ಸಮಾಜವನ್ನು ಪದರು ಪದರಾಗಿ ಅವಲೋಕಿಸುವಾಗ, ನಾನು ಕಂಡಂತೆ, ನನಗೆ ಆಧಾರಗಳ ಮೂಲಕ ಮನವರಿಕೆಯಾದಂತೆ ಸ್ಥಾನಿಕರೆಂಬವರು ಒಂದು ವಿಶಿಷ್ಟವಾದ ಸ್ಥಾನವನ್ನು ಸಮಾಜದಲ್ಲಿ ಪಡೆದ ಬ್ರಾಹ್ಮಣ ವರ್ಗವೆಂದೂ, ಈ ಬ್ರಾಹ್ಮಣ್ಯ ವರ್ಗವು, ಬ್ರಾಹ್ಮಣ್ಯವನ್ನು ತುಳುನಾಡಿನಲ್ಲಿ ಪ್ರಥವಾಗಿ ಪ್ರಚಾರ ಮಾಡಿದ್ದಾಗಿಯೂ ಕಂಡು ಬಂತು. ಸ್ಥಾನಿಕರು ತುಳುನಾಡಿನ ಬ್ರಾಹ್ಮಣರಲ್ಲಿ ಮೊದಲಿಗರು. ಅವರು ಪ್ರಾಚೀನರು, ಅವರ ಹತೋಟಿಯಲ್ಲಿ ನಮ್ಮ ನಾಡಿನ ಪ್ರಾಮುಖ್ಯವಾದ ದೇವಾಲಯಗಳಿದ್ದುವು. ಅವರು ಒಂದು ಕಾಲದಲ್ಲಿ (ಸಾಮಾನ್ಯ ಕ್ರಿ.ಶ.15ನೆಯ ಶತಮಾನದ ವರೆಗೆ) ಉಚ್ಛ್ರಾಯ ಸ್ಥಿತಿಯಲ್ಲಿದ್ದರು. ಕಾಲ ಉರುಳಿದಂತೆ ಬೇರೆ ಬೇರೆ ಬ್ರಾಹ್ಮಣರ ಪಂಗಡಗಳು ನಮ್ಮ ನಾಡಿಗೆ ಬಂದು ನೆಲೆಸಿಕೊಂಡು ಅವರ ಸಂಖ್ಯೆ ಹೆಚ್ಚಾದಾಗ, ಧಾರ್ಮಿಕ ಭಾವನೆಯು ವಿಭಿನ್ನವಾದಾಗ, ಅಧಿಕಾರ ಹಸ್ತಾಂತರವಾದಾಗ ಈ ಮೂಲ ಬ್ರಾಹ್ಮಣರಾದ ಸ್ಥಾನಿಕರು ಪತನಹೊಂದಿದರು - ಈ ರೀತಿ ಡಾ। ಪಾದೂರು ಗುರುರಾಜ ಭಟ್ ಅವರು ಕೃತಿಯ 'ಮೊದಲ ಮಾತು' ಇಲ್ಲಿ ತಿಳಿಸಿರುತಾರೆ.

ಈ ಕೃತಿಯ 'ತುಳುನಾಡಿನಲ್ಲಿ ಬ್ರಾಹ್ಮಣ್ಯ', 'ದಕ್ಷಿಣ ಕನ್ನಡದಲ್ಲಿ ಸ್ಥಾನಿಕರ ಚರಿತ್ರೆ', 'ಶಾಸನಾದಿಗಳಲ್ಲಿ ಸ್ಥಾನಿಕರು' ಎಂಬ ಆಯ್ದ ಭಾಗಗಳ ಸಾರಸಂಗ್ರಹವನ್ನು ನಮ್ಮ ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಸ್. ರಾವ್‌ರವರು ಒದಗಿಸಿದ್ದಾರೆ. ಶ್ರೀಶಾರದಾ ಪತ್ರಿಕೆಯಲ್ಲಿ ಪ್ರತಿ ತಿಂಗಳು ಪ್ರಕಟಿಸಲ್ಪಡುತ್ತಿದೆ.

– ವೈ. ಮೋಹನ ರಾವ್.

**ಶ್ರೀಶಾರದಾ ವೇದಿಕೆಯ ಮಹಾ ಪೋಷಕರು :** ಅಂಬಲಪಾಡಿ ಕೃಷ್ಣ ರಾವ್, ಡಾ। ಪಿ. ವಿಠ್ಠಲ ರಾವ್ ಮಣಿಪಾಲ, ಕೆ. ರಮೇಶ ಶ್ಯಾನುಭಾಗ್ ಸತಾರ, ಟಿ. ಆರ್. ಶ್ಯಾನುಭಾಗ್ ಬೆಂಗಳೂರು, ನಳಿನಿ ಆರ್. ಶ್ಯಾನುಭಾಗ್ ಬೆಂಗಳೂರು, ಡಿ। ಕುಂಜಾರು ವಿಠ್ಠಲ ರಾವ್ ಮುಂಬೈ, ಶ್ಯಾಮರಾವ್ ಅಲೆವೂರು, ವೈ. ಮುರಳೀಕೃಷ್ಣ ರಾವ್ ಉಡುಪಿ, ಸಿ. ಸರ್ವೋತ್ತಮ ರಾವ್ ಚಿಟ್ಪಾಡಿ, ಎಂ. ಸದಾನಂದ ರಾವ್ ಚಿಟ್ಪಾಡಿ, ಡಾ। ವೈ. ಚಂದ್ರಶೇಖರ ರಾವ್ ಕುಕ್ಕಿಕಟ್ಟೆ, ಬಿ. ಎಂ.ಸಂಜೀವ ರಾವ್ ಮಂಗಳೂರು, ಎನ್.ಡಿ. ಜಗನ್ನಾಥ ರಾವ್ ಬೆಂಗಳೂರು, ಕೆ. ಬಿ. ರವಿಶಂಕರ್‌ರಾವ್ ಮಂಗಳೂರು, ಪಿ. ಆರ್. ಸದಾಶಿವ ರಾವ್ ಬೆಂಗಳೂರು, ಬೆಳ್ಮಣ್ ವಾಸುದೇವ ರಾವ್ ಉಡುಪಿ, ಕುಡುಪು ನಾರಾಯಣ ರಾವ್ ಸತಾರ, ಎ. ಕೃಷ್ಣಮೂರ್ತಿ ರಾವ್ ಆಳುಗ್ಗೇಲು, ಶ್ರೀಮತಿ ಸರೋಜಿನಿ ದೇವರಾವ್ ನಂದಿಕೂರು, ಡಾ। ಪರೀಕ ಗೋಪಾಲಕೃಷ್ಣರಾವ್ ಮಾರ್ಪಳ್ಳಿ ಉಡುಪಿ, ಕೆ. ಭಾಸ್ಕರರಾವ್ ಉಡುಪಿ, ಕೆ. ವೇಣುಗೋಪಾಲರಾವ್ ಅಂಬಲ್ಪಾಡಿ, ಬಿ. ಕೃಷ್ಣಮೂರ್ತಿರಾವ್ ಅಂಬಲ್ಪಾಡಿ, ಶ್ರೀಮತಿ ವಿಜಯಾ ಆರ್.ರಾವ್ ಮುಂಬಯಿ, ಪ್ರೊ। ತಂತ್ರಾಡಿ ನಾರಾಯಣ ಶ್ಯಾನುಭಾಗ್.

# ಶ್ರೀಶಾರದಾ ದೇವಸ್ಥಾನ, ಶಾರದಾನಗರ, ಕುಂಜಿಬೆಟ್ಟು, ಉಡುಪಿ-576 102



ಶಾರದಾ ಶಾರದಾಂಭೋಜವದನಾ ವದನಾಂಬುಜೇ ।
ಸರ್ವದಾಸರ್ವದಾಽಸ್ಮಾಕಂ ಸನ್ನಿಧಿಂ ಸನ್ನಿಧಿಂ ಕ್ರಿಯಾತ್ ॥

## ಶ್ರೀಶಾರದಾ ದೇವಸ್ಥಾನದಲ್ಲಿ ನವರಾತ್ರಿ ವಿಶೇಷ ಪೂಜೆಗಳು

ತಾ.08-10-2010ರಿಂದ 17-10-2010ರ ವರೆಗೆ ನವರಾತ್ರಿಯ ಪ್ರತಿದಿನ ಶ್ರೀದೇವಸ್ಥಾನದಲ್ಲಿ ಮಧ್ಯಾಹ್ನ 12-30ಕ್ಕೆ ಹಾಗೂ ರಾತ್ರಿ 8-30ಕ್ಕೆ ವಿಶೇಷ ಪೂಜೆ ನಡೆಯಲಿರುವುದು. ಭಕ್ತಾದಿಗಳು ಪ್ರತಿದಿನ ಪೂಜಾ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಪ್ರಸಾದ ಸ್ವೀಕರಿಸಿ ಕೃತಾರ್ಥರಾಗಬೇಕಾಗಿ ವಿನಂತಿ

- ಆಡಳಿತ ಮಂಡಳಿ

## ಯಕ್ಷಲೋಕ ದರ್ಶನ..... (...1ನೇ ಪುಟದಿಂದ)

ನಗೆಗಡಲಲ್ಲಿ ತೇಲುವಂತೆ ಮಾಡಿದರು. ಅಲ್ಲದೆ ಮುಖ್ಯಪ್ರಾಣರ-ಮಯಾಸುರ, ವಳಕ್ಕುಂಜ ರವಿಶಂಕರ-ಮಾರೀಚ, ಪದ್ಮನಾಭ ಶೆಟ್ಟಿಗಾರರ ರಾವಣದೂತ ಎಲ್ಲವೂ ಸಮರ್ಥವಾಗಿ ಮೂಡಿಬಂತು.

ತಾ.27-7-2010ರಂದು ಯಕ್ಷಗಾನದಲ್ಲಿ ಪ್ರಥಮ ಪ್ರಯೋಗ-ಯಕ್ಷಗಾನ ಹರಟೆ ಕಾರ್ಯಕ್ರಮ. ಡಾ| ಎಂ.ಪ್ರಭಾಕರ ಜೋಷಿ ಯವರ ಹಿರಿತನದಲ್ಲಿ ಉಜಿರೆ ಅಶೋಕ ಭಟ್, ಸುಣ್ಣಂಬಳ ವಿಶ್ವೇಶ್ವರ ಭಟ್, ಶ್ರೀ ರಮಣ ಆಚಾರ್ಯ ಇದನ್ನು ನಡೆಸಿಕೊಟ್ಟರು. ಪ್ರೇಕ್ಷಕರ ಪ್ರತಿಕ್ರಿಯೆ, ಕಲಾವಿದರ ಸಮಯ ಸ್ಫೂರ್ತಿ, ಸಂಘಟನೆಯ ಸ್ವಾರಸ್ಯ, ಅರ್ಥಗಾರಿಕೆ ಸ್ವಾರಸ್ಯ, ಅಭಿಮಾನಿಗಳ ವಿಚಿತ್ರ ಕಲ್ಪನೆ, ಸಾಮೂಹಿಕ ಹೊಂದಾಣಿಕೆ ಮತ್ತು ಭಾಗವತರ ಸಮಯ ಸ್ಫೂರ್ತಿ, ಹೀಗೆ ಏಳು ಸುತ್ತುಗಳಲ್ಲಿ ಮೂರು ಗಂಟೆಗಳ ಕಾಲ ಸರಸಮಯವಾಗಿ ಮೂಡಿ ಬಂದು ಜನಪ್ರಿಯವಾಯಿತು. ಈ ಜನಪ್ರಿಯತೆಗೆ ಕಳಶವಿಟ್ಟಂತೆ ಮಿಮಿಕ್ರಿ ಕಲಾವಿದ ಬಾಯಾರು ನಾರಾಯಣ ಆಚಾರ್ಯರ ಕಂಠದಲ್ಲಿ ಕಾಳಿಂಗ ನಾವಡ, ಬಲಿಪ, ಅಗರಿ, ಮಂಡೆಚ್ಚ, ಧಾರೇಶ್ವರ, ಹೊಳ್ಳ, ಪದ್ಯಾಣ ಹೀಗೆ ಎರಡೂ ತಿಟ್ಟುಗಳ ಭಾಗವತರು ಅವತರಿಸಿದರು. ಇದು ಯಕ್ಷಗಾನಕ್ಕೆ ಹೊಸ ಲೋಕ ದರ್ಶನವಾಯಿತು. ಇದನ್ನು ಸೊಗಸಾಗಿ ನಿರೂಪಿಸಿದ ಕಲಾವಿದ ವಾಸುದೇವ ರಂಗ ಭಟ್.

ತಾ.28-7-2010ರಂದು ''ಯಕ್ಷಗಾನ ಹಾಸ್ಯ-ಲಾಸ್ಯ'', ಶ್ರೀ ಎಂ.ಎಲ್.ಸಾಮಗರ ನಿರೂಪಣೆಯಲ್ಲಿ ಮೂಡಿಬಂದ ಮತ್ತೊಂದು ಚಿಂತನೀಯ ಪ್ರಯೋಗ. ಕೆಲವು ಪ್ರಸಂಗಗಳ ವಿಶಿಷ್ಠ ಸಂದರ್ಭಗಳು ಅದೃಷ್ಯಕ್ಕೆ ಪ್ರಸಿದ್ಧರಾದ ಹಿರಿಯ ಕಲಾವಿದರಿಂದ ರಂಗದರ್ಶನ, ಹಿರಿಯ ಭಾಗವತ ಪುತ್ತಿಗೆ ರಘುರಾಮ ಹೊಳ್ಳ, ಹಿರಿಯ ಮದ್ದಳೆಗಾರ ಪದ್ಯಾಣ ಶಂಕರ ನಾರಾಯಣ ಭಟ್ಟರ ಚೆಂಡೆ, ಲಕ್ಷ್ಮೀಶ ಅಮ್ಮಣ್ಣಾಯ ಮೃದಂಗ, ಸಮರ್ಥ ಹಿಮ್ಮೇಳದೊಂದಿಗೆ ಮೊದಲಿಗೆ ಪರಂಪರೆಯ ಕಿರಾತನೃತ್ಯ, ನಂತರ ಪೆರ್ಡೂರು ನಾರಾಯಣ ಭಟ್ಟರ ಬಾಹುಕ, ವಿಶ್ವೇಶ್ವರ ಭಟ್ಟರ ಋತುಪರ್ಣ (ನಳದಮಯಂತಿ) ನಂತರ ಕೆ. ಗೋವಿಂದ ಭಟ್‌ರ ದೇವೇಂದ್ರ, ಬಂಟ್ವಾಳ ಜಯರಾಮ ಆಚಾರ್ಯರ ಪೂಜಾರಿ (ತುಳಸಿಜಲಂಧರ), ಶ್ರೀ ಕೋಳ್ಯೂರು, ಚೆನ್ನಪ್ಪ ಶೆಟ್ಟಿ, ಮಿಜಾರು ಅಣ್ಣಪ್ಪ, ತಿಮ್ಮಪ್ಪ, (ಶ್ರೀ ಕೃಷ್ಣ ಪಾರಿಜಾತ) ಹಾಗೆ ಪುತ್ತೂರು ಶ್ರೀಧರ ಭಂಡಾರಿ, ಕೆ. ಗೋವಿಂದ ಭಟ್ಟ, ಸೀತಾರಾಮ ಕುಮಾರ್ ಇವರಿಂದ ಕೃಷ್ಣಾರ್ಜುನ ಕಾಳಗದ ಪರಂಪರೆಯ ಸೊಗಡು ಕಲಾವಿದರಿಂದ ಅಪೂರ್ವ ನೈಪುಣ್ಯದೊಂದಿಗೆ ತುಸು ದೀರ್ಘವೇ ಆಗಿ ಪ್ರದರ್ಶಿಸಲ್ಪಟ್ಟು ಯಶಸ್ವಿಯಾಯಿತು.

ತಾ.29-7-2010ರಂದು ಒಂದು ನೂತನ ಕಲ್ಪನೆ, ಚೀಟಿ ಎತ್ತುವ ಮೂಲಕ ಪ್ರಸಂಗ ನಿರ್ಣಯ ಮತ್ತು ಪಾತ್ರ ನಿರ್ಣಯ. ಈ ವಿಭಾಗಕ್ಕೆ ಸಾಮಾನ್ಯ ಎಲ್ಲಾ ಕಲಾವಿದರೂ ಧೈರ್ಯವಾಗಿಯೇ ವೇದಿಕೆ ಏರಿದರು. ಸಭಾಸದರು ಎತ್ತಿದ ಅದೃಷ್ಟ ಚೀಟಿಯಲ್ಲಿ 'ಗದಾಯುದ್ಧ' ಪ್ರಸಂಗ ನಿರ್ಣಯವಾದಾಗ ಭಾಗವತ ದಿನೇಶ ಅಮ್ಮಣ್ಣಾಯರಿಗೆ ಎಲ್ಲಿಲ್ಲದ ಹುರುಪು. ಜೊತೆಗೆ ಅಡೂರು ಗಣೇಶ ರಾವ್ ಹಾಗೂ ಶ್ರೀ ರಾಘವೇಂದ್ರ ಅಸ್ರಣ್ಣರಿಗೆ. ಇದೇ ರೀತಿ ಮುಂದಕ್ಕೆ ಚೀಟಿ ಎತ್ತಿದಾಗ, ರಾಧಾಕೃಷ್ಣ ಕಲ್ಚಾರ್‌ರವರಿಗೆ (ಕೌರವ), ಕೆ. ಗೋವಿಂದ ಭಟ್ (ಧರ್ಮರಾಯ), ಜಬ್ಬಾರ್ ಸಮೋ (ಶ್ರೀ ಕೃಷ್ಣ) ಶಂಭು ಶರ್ಮ (ಭೀಮ), ಸುಣ್ಣಂಬಳ (ಸಂಜಯ) ಈ ರೀತಿ ಹಂಚಿಕೊಂಡ ಪಾತ್ರಗಳು ಕುತೂಹಲ ಭರಿತವಾಗಿ ಸೊಗಸಾಗಿ ಮೂಡಿ ಬಂತು.

ತಾ.30-7-2010ರಂದು ಯಕ್ಷಗಾನ ಹಿಮ್ಮೇಳ 'ಲಯ, ಲಹರಿ', ಕಾರ್ಯಕ್ರಮ. ಈ ಬಾರಿ ತರುಣ ಕಲಾವಿದರಿಗೆ ಅವಕಾಶ ದೊರೆಯಿತು. ಪಟ್ಲ ಸತೀಶ ಶೆಟ್ಟಿ, ಪ್ರಫುಲ್ಲಚಂದ್ರ ನೆಲ್ಯಾಡಿ, ಶಿವಶಂಕರ ಬಲಿಪ, ರವಿಚಂದ್ರ ಕನ್ನಡಿಕಟ್ಟೆ ಭಾಗವತರುಗಳಾದರೆ ಪದ್ಯಾಣ ಶಂಕರ ನಾರಾಯಣ ಭಟ್, ಅಡೂರು ಗಣೇಶ ರಾವ್ ಇವರ ಜುಗಲ್ ಬಂದಿ ಚೆಂಡೆ, ಪದ್ಮನಾಭ ಉಪಾಧ್ಯಾಯ ಹಾಗೂ ಹರ್ಷ ಸಾಮಗ ಬೆಂಗಳೂರು ಇವರ ಮದ್ದಳೆ, ಮೃದಂಗ ವಾದನ ಮಂತ್ರಮುಗ್ಧ ವಾಗಿಸಿದ ಕಾರ್ಯಕ್ರಮ. ಇದನ್ನು ಸಮರ್ಥ ವಾಗಿ ಆಕರ್ಷಣೀಯವಾಗಿ ನಿರೂಪಿಸಿದವರು ಖ್ಯಾತ ಸಂಘಟಕ ಉಜಿರೆ ಅಶೋಕ ಭಟ್‌ರವರು.

ತಾ.31-7-2010ರಂದು ಕೊನೆಯ ದರ್ಶನದ ಮೊದಲು ಸಮಾರೋಪ ಸಮಾರಂಭದಲ್ಲಿ ಮೂರು ಜನ ಕಲಾವಿದರನ್ನು ತಲಾ ರೂ.5000/-ದಂತೆ ಗೌರವಧನವಿತ್ತು ಶ್ರೀಯುತರಾದ ಹರಿಕೃಷ್ಣ ಪುನರೂರು, ಯಕ್ಷಗಾನ ಅಕಾಡೆಮಿಯ ಅಧ್ಯಕ್ಷ ಕುಂಬ್ಳೆ ಸುಂದರರಾವ್, ಪೂಜ್ಯ ಶ್ರೀ ಕ್ಷೇತ್ರ ಕಟೀಲಿನ ಅರ್ಚಕರು, ಲಕ್ಷ್ಮೀ ನಾರಾಯಣ ಅಸ್ರಣ್ಣ ಇವರ ಉಪಸ್ಥಿತಿಯಲ್ಲಿ ಸನ್ಮಾನಿಸಿದರು. ಮುದ್ದಣನ ಕೃತಿಗಳಲ್ಲೊಂದಾದ ''ರತ್ನಾವತಿ ಕಲ್ಯಾಣ'' ತೆಂಕು ಬಡಗು ಕೂಡಾಟ ಹಿಮ್ಮೇಳದಲ್ಲಿ ಗಿರೀಶ್ ರೈ ಬಳಗ (ತೆಂಕು) ಚಂದ್ರಕಾಂತ ಬಳಗ (ಬಡಗು) ಅನುಭವಿ ಕಲಾವಿದ ಡಿ. ಮನೋಹರ ಕುಮಾರ್ (ಭದ್ರಸೇನ) ಬಿಟ್ಟರೆ ಬಹುತೇಕ ಕಲಾವಿದರು ಹವ್ಯಾಸಿಗಳೇ. ಆದರೂ ವ್ಯವಸಾಯ ಕಲಾವಿದರಿಗೆ ಸಮಬಲ ಎಂದೆನಿಸಿ, ತೆಂಕಿನ ಭಾಗವತರಿಂದಾಗಿ ಈ ಪ್ರಸಂಗ ಪ್ರಾರಂಭದಲ್ಲೇ ನಾಲ್ಕನೆಯ ಕಾಲಕ್ಕೆ ಏರಿತು. ಅಲ್ಲದೆ ಕಲಾವಿದರೂ ಸಂಘಟಕರೂ ಆಗಿರುವ ದೇವಾನಂದ ಭಟ್ಟರು (ಚಿತ್ರಧ್ವಜ) ಮಹಾವೀರ ಪಾಂಡಿ (ಹಾಸ್ಯ) ಪಾತ್ರವನ್ನು ವಹಿಸಿ ಒಟ್ಟಿನಲ್ಲಿ ಏಳುದಿನ ಕಲಾರಸಿಕರನ್ನು ತಣಿಸಿದ ಸಂಯೋಜಕ ಎಂ. ದೇವಾನಂದ ಭಟ್ ಬಳಗದ ಪ್ರಯತ್ನ ನಿಜಕ್ಕೂ ಶ್ಲಾಘನೀಯ.

ಅವಲೋಕನಗಾರ

ಶ್ರೀ ಶ್ರೀಧರ ಡಿ.ಎಸ್.ಕಿನ್ನಿಗೋಳಿ

## ಈಶ್ವರಯ್ಯ ಅಭಿನಂದನ ಸಮಿತಿ

ಆರ್ಟಿಸ್ಟ್ ಫೋರಮ್, ಅಲಂಕಾರ್ ಟಾಕೀಸಿನ ಹಿಂಬದಿ, ಉಡುಪಿ - 576 101.
E-mail :madyastha@hotmail.com

ಹಿರಿಯ ಕಲಾವಿಮರ್ಶಕ ಶ್ರೀ ಎ. ಈಶ್ವರಯ್ಯ ಅವರಿಗೆ ಎಪ್ಪತ್ತು ತುಂಬಿದ ಸಂದರ್ಭದಲ್ಲಿ ಅವರ ಅಭಿಮಾನಿಗಳು ಡಿಸೆಂಬರ್ ತಿಂಗಳಲ್ಲಿ ಅಭಿನಂದನ ಸಮಾರಂಭವನ್ನು ಆಯೋಜಿಸಲು ತೀರ್ಮಾನಿಸಿದ್ದಾರೆ. ಕಳೆದ ಮೂರು ದಶಕಗಳಿಗಿಂತಲೂ ಹೆಚ್ಚು ಕಾಲ ಕರ್ನಾಟಕದ ಕರಾವಳಿಯ ಪತ್ರಿಕೋದ್ಯಮ ಮತ್ತು ಕಲಾವಿಮರ್ಶೆಗಳ ಕ್ಷೇತ್ರದಲ್ಲಿ ಗಂಭೀರ ಬಹುಮೂಲ್ಯ ವೈವಿಧ್ಯಪೂರ್ಣವಾದ ಕೊಡುಗೆಗಳಿಂದ ಓರ್ವ ಶ್ರೇಷ್ಠ ಸಂಪನ್ಮೂಲ ವ್ಯಕ್ತಿಯಾಗಿ ಮಾನ್ಯರಾದವರು ಹಿರಿಯ ಸಾಂಸ್ಕೃತಿಕ ಪ್ರವೃತ್ತ ಶ್ರೀ ಎ. ಈಶ್ವರಯ್ಯ. ತಮ್ಮ ಭಾಷಣ, ಬರಹ, ಮಾರ್ಗದರ್ಶನಗಳಿಂದ ಸಂಸ್ಕೃತಿಯ ತಿಳಿವನ್ನು ವಿಸ್ತರಿಸುವ ಅರಳಿಸುವ ಕೆಲಸವನ್ನು ಮಾಡಿದವರು. ತಾವು ಪ್ರವರ್ತಿಸಿದ ಕ್ಷೇತ್ರಗಳಲ್ಲಿ ಎತ್ತರದ ಗೌರವ ಪಡೆದವರು.

ಕಳೆದ ಮೂರು ದಶಕಗಳಿಗಿಂತಲೂ ಹೆಚ್ಚು ಕಾಲ ಉದಯವಾಣಿ ಪತ್ರಿಕೆ ಬಳಗದ ಸಂಪಾದಕ ಮಂಡಳಿಯಲ್ಲಿದ್ದು ದಕ್ಷಿಣಕನ್ನಡ, ಉಡುಪಿ, ಕಾಸರಗೋಡು ಜಿಲ್ಲೆಗಳ ಸಾಂಸ್ಕೃತಿಕ ಚಟುವಟಿಕೆಗಳಿಗೆ ಸದ್ದಿಲ್ಲದೆ ಪತ್ರಿಕಾ ಮಾಧ್ಯಮದ ಮೂಲಕ ಶ್ರಮಿಸಿದ ಈಶ್ವರಯ್ಯನವರಿಗೆ ಈಗ ವಯಸ್ಸು ಎಪ್ಪತ್ತೊಂದು. ಪತ್ರಿಕೆಯಲ್ಲಿದ್ದುಕೊಂಡು ಸಾಹಿತ್ಯ, ಸಂಗೀತ, ನೃತ್ಯ, ಯಕ್ಷಗಾನ, ಛಾಯಾಚಿತ್ರ ಮತ್ತು ಚಿತ್ರಕಲೆ ಮುಂತಾದ ಚಟುವಟಿಕೆಗಳಿಗೆ ದೃಢತೆಯನ್ನು ಒದಗಿಸಿಕೊಟ್ಟ ವ್ಯಕ್ತಿ ಶ್ರೀ ಈಶ್ವರಯ್ಯನವರು. ಅವರಿಂದ ಯಾವುದಾದರೊಂದು ರೀತಿಯಲ್ಲಿ ಪ್ರಯೋಜನವನ್ನು ಪಡೆಯದ ಕಲಾವಿದ ಈ ಅವಿಭಾಜ್ಯ ಕರಾವಳಿ ಪ್ರದೇಶದಲ್ಲಿ ಇರಲಿಕ್ಕಿಲ್ಲ ಎಂದೇ ಹೇಳಬಹುದು. ಯಾವುದೇ ಗೌರವ ಪ್ರಶಸ್ತಿಗಳ ಹಿಂದೆ ಹೋಗದೆ ತನ್ನ ಬರಹ ಮತ್ತು ಮಾತುಗಾರಿಕೆಯ ಮೂಲಕ ಈ ಕರಾವಳಿಯ ರಸಿಕರನ್ನು ತಿದ್ದಿ ತೀಡಿ ಒಪ್ಪಗೊಳಿಸಿದ ಈ ಹಿರಿಯ ವ್ಯಕ್ತಿಯನ್ನು ನಾವೆಲ್ಲ ಸೇರಿ ಇದೇ ಡಿಸೆಂಬರ್ ತಿಂಗಳಲ್ಲಿ ಸಾರ್ವಜನಿಕವಾಗಿ ಸಮ್ಮಾನಿಸಬೇಕೆಂದು ನಿಶ್ಚಯಿಸಿದ್ದೇವೆ. ಈ ಸಂಬಂಧ ವಿದ್ಯಾವಾಚಸ್ಪತಿ ಶ್ರೀ ಬನ್ನಂಜೆ ಗೋವಿಂದಾಚಾರ್ಯರ ಗೌರವಾಧ್ಯಕ್ಷತೆಯಲ್ಲಿ ಕಾರ್ಯಕಾರಿ ಸಮಿತಿಯನ್ನು ರಚಿಸಲಾಗಿದೆ. ಶ್ರೀ ಈಶ್ವರಯ್ಯನವರ ಒಡನಾಡಿಗಳು ಅಭಿಮಾನಿಗಳು ಈ ಸಂದರ್ಭದಲ್ಲಿ ಸಮ್ಮಾನ ಸಮಾರಂಭ ಯಶಸ್ವಿಗೊಳಿಸುವರೆ ತನು-ಮನ-ಧನಗಳೊಂದಿಗೆ ಸಹಕರಿಸಬೇಕೆಂದು ಕೋರುವ,

-ಅಧ್ಯಕ್ಷರು ಮತ್ತು ಸದಸ್ಯರು

## ಶ್ರೀಶಾರದಾ ಕ್ರೆಡಿಟ್ ಕೋ-ಅಪರೇಟಿವ್ ಸೊಸೈಟಿ (ನಿ.)ಯ 2009-10ನೇ ಸಾಲಿನ ವಾರ್ಷಿಕ ಮಹಾಸಭೆ


ಉಡುಪಿಯ ಶ್ರೀ ಶಾರದಾ ಕ್ರೆಡಿಟ್ ಕೋ-ಅಪರೇಟಿವ್ ಸೊಸ್ಶಾಟಿಯ 2009-10ನೇ ಸಾಲಿನ ಸರ್ವಸದಸ್ಯರ ಸಭೆಯು ತಾ.26-09-2010 ರವಿವಾರ ಬೆಳಿಗ್ಗೆ ಸೊಸ್ಶಾಟಿಯ ಕಚೇರಿಯಿರುವ ಭೂವರಾಹ ಸಂಕೀರ್ಣದಲ್ಲಿ ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ಸೊಸ್ಶಾಟಿಯ ಅಧ್ಯಕ್ಷರಾದ ಮಾರ್ಪಳ್ಳಿ ಸದಾನಂದರಾಯರು ವಹಿಸಿದ್ದರು.

ಸದಸ್ಯರನ್ನು ಆತ್ಮೀಯವಾಗಿ ಸ್ವಾಗತಿಸಿದ ಅಧ್ಯಕ್ಷರು, ಸತತವಾಗಿ 7ನೇ ವರ್ಷಗಳಿಂದ ಲಾಭವನ್ನು ಗಳಿಸಿದ್ದು ಸೊಸೈಟಿಯು ಮುಂದಿನ ವರ್ಷದಲ್ಲೂ ಲಾಭಗಳಿಸುವ ಹಾದಿಯಲ್ಲಿ ಮುನ್ನಡೆದಿದೆ. ಸೊಸೈಟಿಯ ಕಾರ್ಯನಿರತ ಬಂಡವಾಳವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಸದಸ್ಯ ಬಾಂಧವರು ಪಾಲು ಬಂಡವಾಳ ಹಾಗೂ ಠೇವಣಿಗಳಲ್ಲಿ ಹಣ ತೊಡಗಿಸಿ ಸಹಕರಿಸಬೇಕು ಎಂದರು.

2009-10ನೇ ಸಾಲಿನ ವಾರ್ಷಿಕ ವರದಿಯನ್ನು ಸಭೆ ಸರ್ವಾನುಮತದಿಂದ ಅಂಗೀಕರಿಸಿತು. ನಂತರ 2009-10ನೇ ಸಾಲಿನ ಲಾಭ-ನಷ್ಟದ ತಃಖ್ತೆ ಹಾಗೂ ಆಸ್ತಿ-ಜವಾಬ್ದಾರಿ ತಃಖ್ತೆಗಳನ್ನು ಕಾರ್ಯದರ್ಶಿ ಪಟ್ಟಾಭಿರಾಮರವರು ಸಭೆಯ ಮುಂದಿಟ್ಟರು. ತಃಖ್ತೆಗಳನ್ನು ಕೂಲಂಕುಶವಾಗಿ ಪರಿಶೀಲಿಸಿದ ಸಭೆಯು ಹಲವು ವಿಷಯಗಳಿಗೆ ಸಮಾಧಾನಕರ ವಿವರಣೆಗಳನ್ನು ಪಡೆದು ತನ್ನ ಅಂಗೀಕಾರವನ್ನು ನೀಡಿತು. 2010-11ನೇ ಸಾಲಿನ ಅಂದಾಜು ಆಯವ್ಯಯ ತಃಖ್ತೆಯನ್ನು ಸಭೆಯು ಅನುಮೋದಿಸಿತು. 2009-10ನೇ ಸಾಲಿನಲ್ಲಿ ಸೊಸ್ಶಾಟಿಯ ಪ್ರಾಥಮಿಕ ಸದಸ್ಯರಿಗೆ 10 ಶೇಕಡಾ ಲಾಭಾಂಶ ನೀಡುವರೆ ನಿರ್ದೇಶಕ ಮಂಡಳಿ ಮಾಡಿದ ಶಿಫಾರಸ್ಸನ್ನು ಸರ್ವಸದಸ್ಯರ ಸಭೆಯು ಅನುಮೋದಿಸಿತು.

ಸೊಸ್ಶಾಟಿಯ ಕುಕ್ಕಿಕಟ್ಟೆ ಶಾಖೆಯ ಶಾಖಾವ್ಯವಸ್ಥಾಪಕ ಶ್ರೀ ವಿಶ್ವನಾಥ ರಾವ್ ರವರ ಧನ್ಯವಾದ ಸಮರ್ಪಣೆಯೊಂದಿಗೆ ಸಭೆಯು ಮುಕ್ತಾಯವಾಯಿತು. ವೇದಿಕೆಯಲ್ಲಿ ನಿರ್ದೇಶಕರಾದ ಯು. ಪ್ರಫುಲ್ಲಚಂದ್ರ ರಾವ್, ವೈ.ಮೋಹನ ರಾವ್, ವೈ. ಮುರಲಿಕೃಷ್ಣ ರಾವ್, ವೈ. ಪ್ರಕಾಶಕುಮಾರ್, ಯು. ಅರವಿಂದ ಕುಮಾರ್, ಬಿ. ಕೃಷ್ಣಮೂರ್ತಿ ರಾವ್ ಹಾಗೂ ಗೀತಾ ಕೃಷ್ಣಕುಮಾರ್ ಉಪಸ್ಥಿತರಿದ್ದರು.

# ಅಜಾಮಿಳನ ಕತೆ



**– ವೈ. ಶಂಕರನಾರಾಯಣ ರಾವ್, ಪಡುಬಿದ್ರಿ**

ವೇದವಿಹಿತವಾದದ್ದು ಧರ್ಮ. ಅದಕ್ಕೆ ವಿರುದ್ಧವಾದದ್ದು ಅಧರ್ಮ ಎಂದೂ ಹಿಂದೂ ಪುರಾಣಗಳು ಹೇಳುತ್ತವೆ. ಜಗತ್ತಿನಲ್ಲಿ ಜನರು ಮಾಡುವ ಪಾಪ ಪುಣ್ಯಗಳನ್ನೆಲ್ಲಾ ಸೂರ್ಯ, ಅಗ್ನಿ, ಆಕಾಶ, ದೇವತೆಗಳು, ಗೋವುಗಳು, ಚಂದ್ರ, ಸಂಧ್ಯೆ, ಜಲ, ಭೂಮಿ, ಕಾಲ, ಯಮಧರ್ಮ ಎಂಬ ಹನ್ನೊಂದು ಜನ ಸದಾ ದೃಷ್ಟಿಸಿ ನೋಡುತ್ತಾ ಜೀವಿಗಳ ಪಾಪ ಪುಣ್ಯಗಳಿಗೆ ಸಾಕ್ಷಿಗಳಾಗಿರುತ್ತಾರೆ. ಮನುಷ್ಯನಾಗಿ ಹುಟ್ಟಿದ ಮೇಲೆ ಕರ್ಮ ಅನಿವಾರ್ಯವಾಗಿರುವಂತೆಯೇ ಕರ್ಮಕ್ಕೆ ತಕ್ಕ ಫಲವೂ ಅನಿವಾರ್ಯ. ದೇಹದಲ್ಲಿ ಅಡಗಿರುವ ಐದು ಕರ್ಮೇಂದ್ರಿಯಗಳು ಮನಸ್ಸಿಗೆ ಅಧೀನವಾಗಿ ಲಿಂಗಶರೀರವೆಂಬ ಸೂಕ್ಷ್ಮ ದೇಹದಲ್ಲಿ ಬೀಜರೂಪವಾಗಿದ್ದು ಸ್ಥೂಲ ದೇಹದ ಅವಸಾನವಾದರೂ ಕರ್ಮವಾಸನೆಯನ್ನು ಹೊತ್ತು ಮುಂದಿನ ಜನ್ಮಕ್ಕೆ ಕಾರಣವಾಗುತ್ತವೆ. ಪುನರ್ಜನ್ಮದಲ್ಲಿ ಮನುಷ್ಯನು ಜೀವಭರಿತ ದೇಹಕ್ಕೆ ಅಂಟಿಕೊಂಡಿರುವ ಲಿಂಗಶರೀರವನ್ನೇ ಆತ್ಮವೆಂದು ಭ್ರಮಿಸಿ ಇಂದ್ರಿಯ-ಮನಸ್ಸುಗಳಿಗೆ ಅಧೀನನಾಗಿ ಪಾಪ-ಪುಣ್ಯ ಕರ್ಮಗಳನ್ನು ಮಾಡುತ್ತಿರುತ್ತಾನೆ. ಅದರ ಫಲವಾಗಿ ಸ್ವರ್ಗ ನರಕಗಳನ್ನು ಸೇರುತ್ತಾನೆ.

ಧರ್ಮಸೂಕ್ಷ್ಮವನ್ನು ಅರ್ಥ ಮಾಡಿಕೊಳ್ಳುವುದು ಕಷ್ಟ. ಬಟ್ಟೆಯಲ್ಲಿನ ಹಾಸು ಹೊಕ್ಕುಗಳ ನೇಯ್ಗೆಯಂತೆ ಎಲ್ಲೆಡೆ ಇರುವ ಸರ್ವೇಶ್ವರನು ಈ ಜಗತ್ತನ್ನೆಲ್ಲಾ ಬ್ರಹ್ಮದೇವನ ಮೂಲಕ ನಿಯಂತ್ರಿಸುತ್ತಾ ಒಂದು ಹುಲ್ಲುಕಡ್ಡಿಯ ತನಕ ನಿಯಮಿಸುತ್ತಿರುವನು. ಪಾಪ ಕರ್ಮಗಳ ನಿವಾರಣೆಗಳಿಗೂ ಒಂದು ಸೂಕ್ಷ್ಮವಾದ ಧರ್ಮವಿದೆ. ಅದುವೇ ಭಾಗವತ ಧರ್ಮ, ಶ್ರೀಹರಿಯ ಹೆಸರನ್ನು ಸ್ಮರಿಸುವುದರ ಮೂಲಕ ಭಕ್ತಿಯೋಗವನ್ನು ಪಡೆಯುವುದೇ ಭಾಗವತ ಧರ್ಮದ ತಿರುಳು. ಭಕ್ತಿಯಿಂದ ಒಮ್ಮೆ ಶ್ರೀಮನ್ನಾರಾಯಣ ಸ್ಮರಣೆ ಮಾಡಿದರೂ ಪಾಪ ಕರ್ಮಗಳೆಲ್ಲವೂ ನಶಿಸಿ ಹೋಗುತ್ತವೆ ಎನ್ನುತ್ತದೆ ಭಾಗವತ. ಹಿಂದೂ ಧರ್ಮದ ಸಾರ ಸರ್ವಸ್ವಗಳಲ್ಲಿ ಒಂದಾದ ಆತ್ಮಜ್ಞಾನವನ್ನು ಬೋಧಿಸುವ ದೃಷ್ಟಾಂತ ಕತೆಗಳನ್ನು ಮಹಾಪುರಾಣವಾದ ಭಾಗವತದಲ್ಲಿ ಹೇರಳವಾಗಿ ಕಾಣಬಹುದು. ಮಹಾಪಾಪಿಯಾದ ಅಜಾಮಿಳನು ತನ್ನ ಮರಣಕಾಲದಲ್ಲಿ ಅರಿಯದೆಯೇ ಮಾಡಿದ ನಾರಾಯಣ ನಾಮಸ್ಮರಣೆಯ ಪುಣ್ಯದಿಂದ ಹೇಗೆ ಪರಮಪದವನ್ನು ಹೊಂದಿದನೆಂದು ಭಾಗವತದಿಂದ ಆರಿಸಿದ ಈ ಕತೆಯ ಮೂಲಕ ಪ್ರಸ್ತುತಪಡಿಸಲಾಗಿದೆ.

ಬಹಳ ಹಿಂದೆ ಕನ್ಯಾಕುಬ್ಜದಲ್ಲಿ ಅಜಾಮಿಳನೆಂಬ ಸಚ್ಚರಿತ್ರದ ಬ್ರಾಹ್ಮಣನಿದ್ದನು. ಅವನು ವೇದಾಂತ ಪಾರಂಗತನಾಗಿದ್ದು ಪರಸ್ತ್ರೀಯರನ್ನು ಕಣ್ಣೆತ್ತಿಯೂ ನೋಡುತ್ತಿರಲಿಲ್ಲ. ಒಳ್ಳೆಯ ಆಚಾರಶೀಲನಾಗಿದ್ದ ಆತನು ದಯಾಳು, ಸತ್ಯವಂತ, ಪರೋಪಕಾರಿ, ಅಸೂಯಾರಹಿತನಾಗಿದ್ದು ಗುರುಹಿರಿಯರನ್ನೂ ಅತಿಥಿ ಅಭ್ಯಾಗತರನ್ನೂ ದೇವರಂತೆ ಕಾಣುವವನು. ಆತನು ಮಹಾ ದೈವಭಕ್ತನಾಗಿದ್ದು ಸಾವಿತ್ರಿಯಂತಹ ಮಹಾಮಂತ್ರಗಳನ್ನು ಸಿದ್ಧಿಸಿಕೊಂಡವನಾಗಿದ್ದನು. ಒಂದು ದಿನ ಆತನು ತಂದೆಯ ಅಪ್ಪಣೆಯಂತೆ ಹೂವು, ಹಣ್ಣು, ದರ್ಭೆ, ಸಮಿತ್ತುಗಳನ್ನು ತರಲು ಕಾಡಿಗೆ ಹೋದನು. ತನ್ನ ಕೆಲಸವನ್ನು ಮುಗಿಸಿ ಇನ್ನೇನು ಹಿಂದಿರುಗುವೆನೆಂದು ಆಲೋಚಿಸುವಲ್ಲಿ ಸುಂದರಿಯಾದ ಚಾಂಡಾಲ ಸ್ತ್ರೀಯೊಬ್ಬಳು ಅವನ ದೃಷ್ಟಿಗೆ ಬಿದ್ದಳು. ಅವಳು ಗಂಟಲು ಮಟ್ಟ ಹೆಂಡ ಕುಡಿದು ಮತ್ತೇರಿ ಮೈಮರೆತು ಉಟ್ಟ ಸೀರೆ ಬಿಚ್ಚಿ ಹೋಗಿ ಅರೆನಗ್ನಳಾಗಿದ್ದಳು; ನಾಚಿಕೆಯನ್ನು ತೊರೆದು ನಗುತ್ತಾ, ಹಾಡುತ್ತಾ ಕುಣಿಯುತ್ತಿದ್ದಳು. ಅವಳ ಸಂಗಡಿಗನಾದ ಯುವಕನೊಬ್ಬನು ಕಳ್ಳು ಕುಡಿದು ಇಹದ ಪ್ರಜ್ಞೆ ಇಲ್ಲದೆ ಅವಳೊಂದಿಗೆ ವಿನೋದ ವಿಹಾರಗಳಲ್ಲಿ ಮಗ್ನನಾಗಿದ್ದನು. ಅವರಿಬ್ಬರೂ ಕಾಮನ ಕೈಗೊಂಬೆಗಳಾಗಿ ಶೃಂಗಾರ ಚೇಷ್ಟೆಯಲ್ಲಿ ಮುಳುಗೇಳುತ್ತಿದ್ದರು.

ಅಲ್ಲಿಂದ ಮುಂದಕ್ಕೆ ಅಜಾಮಿಳನ ಬಾಳಿಗೆ ನವನವೀನ ತಿರುವೊಂದು ದೊರಕಿತು. ಆ ಹೆಣ್ಣಿಗೆ ಮಾರುಹೋದ ಅವನಿಗೆ ಸ್ನಾನ ಸಂಧ್ಯಾವಂದನಾದಿಗಳು ಬೇಡವಾದವು. ಅವಳನ್ನು ಒಲಿಸಿಕೊಳ್ಳುವುದಕ್ಕಾಗಿ ಅಂದವಾದ ವಸ್ತ್ರ ಒಡವೆಗಳನ್ನು ಕೊಂಡೊಯ್ದು ಕೊಡುವವನು. ಅಗ್ನಿಸಾಕ್ಷಿಯಾಗಿ ಕೈ ಹಿಡಿದ ಸತಿಯನ್ನು ತೊರೆದು ಚಾಂಡಾಲ ಹೆಣ್ಣಿನ ಕಣ್ಣ ಕಟಾಕ್ಷಕ್ಕಾಗಿ ಹಣ ಆಸ್ತಿಗಳೆಲ್ಲವನ್ನೂ ಕರಗಿಸಿಕೊಂಡನು. ಕೊನೆಗೆ ತಾನೊಲಿದ ಹೆಣ್ಣಿನ ಸಂಸಾರವನ್ನು ಸಲಹಲು ಸುಳ್ಳು, ವಂಚನೆ, ಕಳ್ಳತನಕ್ಕೆ ಇಳಿದು ಅವಳಲ್ಲಿಯೇ ಸ್ವರ್ಗ ಸುಖವನ್ನು ಕಾಣುತ್ತಿದ್ದನು.

ಕಾಲಕ್ರಮದಲ್ಲಿ ಜೂಜು, ಕುಡಿತ, ಕೊಲೆ, ಸುಲಿಗೆಗಳೇ ಅಜಾಮಿಳನ ಗೇಮೆಗಳಾದವು. ಪಶು, ಪಕ್ಷಿ, ಮೃಗಗಳನ್ನು ಕೊಂದು ತಿನ್ನುವುದು ಅವನ ಉಪವೃತ್ತಿಯಾಯಿತು. ಹೀಗೆ ಅನಾಚಾರದ ಜೀವನವನ್ನು ನಡೆಸುತ್ತಾ ಆ ಹೆಣ್ಣಿನಿಂದ ಹತ್ತು ಮಕ್ಕಳನ್ನು ಪಡೆದು ಆತನು ಎಂಬತ್ತೆಂಟು ವರ್ಷದ ವೃದ್ಧನಾದನು. ಅವನ ಕೊನೆಯ ಮಗನ ಹೆಸರು ನಾರಾಯಣನೆಂಬುದಾಗಿತ್ತು. ನಾರಾಯಣನೆಂದರೆ ಅಜಾಮಿಳನಿಗೆ ಅತಿ ಮಮತೆ. ಅವನ ಮುದ್ದು ಮಾತುಗಳಿಂದ ಪುಳಕಗೊಳ್ಳುವನು. ಅವನ ಆಟ-ಪಾಟಗಳನ್ನು ನೋಡಿ ಸಂತೋಷಿಸುವನು. ಅವನಿಗೆ ತನ್ನ ಕೈಯಾರೆ ತಿನ್ನಿಸಿ ಕುಡಿಸಿ ತನ್ನ ಬಳಿಯೇ ಮಲಗಿಸಿಕೊಳ್ಳುವನು. ಒಟ್ಟಾರೆಯಾಗಿ ಅವನಿಗೆ ಜಗತ್ತಿನಲ್ಲಿ ಸರ್ವಸ್ವವೂ ಆ ಮಗನೇ ಆಗಿ ಹೋದನು. ಆ ಮಗನ ಕನವರಿಕೆಯಲ್ಲಿ ಅವನಿಗೆ ತನ್ನ ಬೆನ್ನ ಹಿಂದೆ ನಗುತ್ತಾ ನಿಂತಿರುವ ಮೃತ್ಯು ದೇವತೆ ಕಂಡು ಬರಲಿಲ್ಲ. ಒಂದು ದಿನ ಭಯಂಕರ ರೂಪಿನ ಯಮದೂತರು ಕೈಯಲ್ಲಿ ಪಾಶವನ್ನು ಹಿಡಿದುಕೊಂಡು ಕೆಂಗಣ್ಣಿನಿಂದ ಅವನನ್ನು ದುರದುರನೆ ದಿಟ್ಟಿಸಿ ಕಟಕಟನೆ ಹಲ್ಲು ಕಡಿಯುತ್ತಾ ಇದಿರಿಗೆ ಬರಲು ಅಜಾಮಿಳನು ಪ್ರಾಣಭಯದಿಂದ ಗಡಗಡನೆ ನಡುಗುತ್ತಾ 'ನಾರಾಯಣಾ' ಎಂದು ತನ್ನ ಮಗನನ್ನು ಕೂಗಿದನು.

ಅಜಾಮಿಳನ ಬಾಯಿಂದ 'ನಾರಾಯಣಾ' ಎಂಬ ಶಬ್ದ ಬಂದ ಕೂಡಲೇ ದೇವರ ದೇವನಾದ ನಾರಾಯಣನ ದೂತರೂ ಅಲ್ಲಿ ಪ್ರತ್ಯಕ್ಷರಾದರು. ಅಜಾಮಿಳನ ಜೀವವನ್ನು ಸೆಳೆಯುತ್ತಿರುವ ಯಮ ದೂತರನ್ನು ತಡೆದು ಅವನು ಕಡೆಗಾಲದಲ್ಲಿ ನಾರಾಯಣ ಸ್ಮರಣೆ ಮಾಡಿದುದರಿಂದ ನರಕ ಶಿಕ್ಷೆಗೆ ಅನರ್ಹನೆಂದು ತಿಳಿಸಿದರು. ಆದರೆ ಯಮದೂತರು ಅಜಾಮಿಳನು ಕೂಗಿದುದು ಶ್ರೀಹರಿಯನ್ನಲ್ಲ ತನ್ನ ಮಗನನ್ನು ಎಂದು ವಾದಿಸಿದರು. ಕೋಪದಿಂದಲೋ, ಹುಡುಗಾಟದಿಂದಲೋ, ಬಾಯಿ ತಪ್ಪಿಯೋ ನಾರಾಯಣ ನಾಮಸ್ಮರಣೆ ಮಾಡಿದರೆ ಪಾಪಗಳೆಲ್ಲವೂ ನಿಶ್ಶೇಷವಾಗುವುವು ಎಂದು ಶ್ರೀಹರಿಯ ದೂತರು ಧರ್ಮಸೂಕ್ಷ್ಮವನ್ನು ವಿವರಿಸಿದರು. ಕೊನೆಗೆ ಧರ್ಮ ತೀರ್ಮಾನವನ್ನು ಯಮ ಧರ್ಮನಿಗೇ ಒಪ್ಪಿಸುವುದೆಂದು ಅವರೊಳಗೆ ಒಪ್ಪಂದವಾಯಿತು. ಯಮದೂತರು ಯಮ ನಲ್ಲಿಗೆ ಹೋಗಿ ಮರ್ತ್ಯಲೋಕದಲ್ಲಿ ನಡೆದುದೆಲ್ಲವನ್ನೂ ಹೇಳಿದರು. ಯಮ ಧರ್ಮನು ''ಅಯ್ಯಾ ದೂತರೇ, ಶ್ರೀಮನ್ನಾರಾಯಣನ ಮಹಿಮೆಯನ್ನು ಅರ್ಥಮಾಡಿಕೊಳ್ಳುವುದು ನಮ್ಮಂತಹ ದೇವಾನುದೇವತೆಗಳಿಗೂ ಕಷ್ಟ. ಆತನ ದೂತರೂ ಮಹಾಮಹಿಮಾನ್ವಿತರು. ಅವರು ಮಹಾಪಾಪಿಯಾದ ಅಜಾಮಿಳನನ್ನು ನಮ್ಮಿಂದ ಬಿಡಿಸಿದರೆಂದು ಬೇಸರಗೊಳ್ಳದಿರಿ. ಭಾಗವತ ಧರ್ಮದ ನೀತಿಗನುಸಾರವಾಗಿಯೇ ಅಜಾಮಿಳನಿಗೆ ಮುಕ್ತಿ ದೊರಕುವುದರಲ್ಲಿದೆ. ಇದಕ್ಕೆ ತಡೆಯೊಡ್ಡಲು ನಾವೆಷ್ಟರವರು?'' ಎಂದು ಹೇಳಿ ಶ್ರೀಹರಿಯ ನಾಮಸ್ಮರಣೆಯಲ್ಲಿ ಮೈಮರೆತನು.

ಇತ್ತ ಅಜಾಮಿಳನು ಯಮದೂತರಿಗೂ ವಿಷ್ಣುದೂತರಿಗೂ ನಡೆದ ವಾದ ವಿವಾದಗಳನ್ನು ಕೇಳಿಸಿಕೊಂಡನು. ತನ್ನ ಪಾಪ ಕರ್ಮಗಳಿಗೆ ಪಶ್ಚಾತ್ತಾಪ ಪಟ್ಟ ಅವನಲ್ಲಿ ಭಕ್ತಿ ನೆಲೆಗೊಂಡಿತು. ಅವನು ವೈರಾಗ್ಯವಶನಾಗಿ ಗಂಗಾತೀರಕ್ಕೆ ಹೋಗಿ ದೃಢಶಕ್ತಿಯಿಂದ ತಪೋನಿರತನಾದನು. ತನ್ಮೂಲಕ ಬ್ರಹ್ಮಜ್ಞಾನವನ್ನೂ, ಆತ್ಮಜ್ಞಾನವನ್ನೂ ಪಡೆದುಕೊಂಡನು. ಕಾಲಾನಂತರ ವಿಷ್ಣುದೂತರು ಮತ್ತೊಮ್ಮೆ ಕಾಣಿಸಿಕೊಂಡು ಅವನಿಗೆ ದಿವ್ಯರೂಪವನ್ನು ಕರುಣಿಸಿ ವಿಮಾನವನ್ನೇರಿಸಿ ವೈಕುಂಠಕ್ಕೆ ಕರೆದುಕೊಂಡು ಹೋಗಿ ವಿಷ್ಣು ಸನ್ನಿಧಿಗೆ ಸೇರಿಸಿದರು.

(ಆಧಾರ ಗ್ರಂಥ : ಶ್ರೀ ತ.ಸು.ಶಾಮರಾಯರ ''ವಚನ ಭಾಗವತ'')

# ಕಾರ್ಕಳ : ಶಂಕರ ಪ್ರತಿಷ್ಠಾನದ ಪುನರುತ್ಥಾನ

ಅಂದು ಆದಿಗುರು ಶಂಕರಾಚಾರ್ಯರು ಅಧೋಗತಿಗಿಳಿದಿದ್ದ ಹಿಂದೂ ಸನಾತನ ಧರ್ಮದ ಪುನರುತ್ಥಾನಕ್ಕಾಗಿ ಭಾರತದ ಉದ್ದಗಲಕ್ಕೆ ಸಂಚರಿಸಿ ಜಗನ್ಮಾನ್ಯ ಧರ್ಮವೆಂಬ ಕೀರ್ತಿ ಸನಾತನ ಧರ್ಮಕ್ಕೆ ತಂದುಕೊಡುವ ಮೂಲಕ ರಾಷ್ಟ್ರೀಯ ಭಾವೈಕ್ಯತೆ ಮೂಡಿಸಿದರು. ಕಾರ್ಕಳದಲ್ಲಿ ಇಪ್ಪತ್ತೈದು ವರ್ಷಗಳ ಹಿಂದೆ (1984ರಲ್ಲಿ) ಶಂಕರ ಪ್ರತಿಷ್ಠಾನ ಸ್ಥಾಪಿಸಲ್ಪಟ್ಟಿತು. ಪ್ರತಿಷ್ಠಾನದ ನೂತನ ಅಧ್ಯಕ್ಷ ವಿ.ಮನೋಹರ ರಾವ್ ಮತ್ತು ಶ್ರೀ ಭವಾನಿ ಶಂಕರ್‌ರಾವ್ ಹಾಗೂ ಶ್ರೀ ಶಿವರಾವ್ ನಕ್ರೆ ಇವರು ಕಾರ್ಕಳದ ಹಳ್ಳಿ, ಪೇಟೆ ಪಟ್ಟಣ ಸುತ್ತಿ ಸದಸ್ಯರನ್ನು ನೋಂದಾಯಿಸಿ ಪ್ರತಿಷ್ಠಾನದ ಪುನರುತ್ಥಾನಕ್ಕಾಗಿ ಹಗಲಿರುಳೂ ಶ್ರಮಿಸುತ್ತಿರುವುದು ಜಾತಿಬಾಂಧವರಿಗೆ ಹೆಮ್ಮೆಯ ವಿಚಾರ. ಶ್ರೀ ಶಂಕರ ಭಗವತ್ಪಾದರ ಹೆಸರು ಹೊತ್ತ ಸಂಸ್ಥೆ ಆ ಮಹಾ ಪುಣ್ಯ ಪುರುಷನ ಹೆಸರಿಗೆ ಧಕ್ಕೆಯಾಗದಂತೆ ನಮ್ಮವರನ್ನೆಲ್ಲಾ ತಿಂಗಳಿಗೊಮ್ಮೆ ಸಭೆ ಸೇರಿಸಿ, ವಿಚಾರ ವಿನಿಮಯ ಮಾಡಲು ನಿರ್ಧರಿಸಿದ್ದು ಸಂತಸದ ಸಂಗತಿ. ಸಾಮೂಹಿಕ ಉಪಾಕರ್ಮವನ್ನು ಶ್ರೀ ಭವಾನಿ ಶಂಕರರ 'ದುರ್ಗಾಪ್ರಸಾದ'ದಲ್ಲಿ ನಡೆಸಿದರು.

ಶ್ರೀಮತಿ ಸಾವಿತ್ರಿ ಮನೋಹರರ ಮುಂದಾಳತ್ವದಲ್ಲಿ ಶಂಕರ ಪ್ರತಿಷ್ಠಾನದ ಮಹಿಳಾ ವಿಭಾಗ ಆರಂಭಗೊಂಡಿತು. ಶ್ರೀ ವರಮಹಾಲಕ್ಷ್ಮೀ ಪೂಜೆಯನ್ನು ಮಹಿಳೆಯರು ಯಾಜಿ ನಿರಂಜನ್ ಭಟ್ ಪಾವಂಜೆ ಇವರ ಪೌರೋಹಿತ್ಯದಲ್ಲಿ ಸಾಮೂಹಿಕವಾಗಿ ನೆರವೇರಿಸಿದರು. ಅಂದು ಸೇರಿದ ಸಭೆಯ ಅಧ್ಯಕ್ಷತೆ ವಹಿಸಿದ್ದ ಪ್ರತಿಷ್ಠಾನದ ಅಧ್ಯಕ್ಷರಾದ ಶ್ರೀ ವಿ. ಮನೋಹರ್‌ರಾವ್ ಶುಂಠಿಪಾಡಿ ಇವರು ಸ್ವಾಗತಿಸಿ ಪ್ರಾಸ್ತಾವಿಕ ಭಾಷಣ ಮಾಡಿದರು. ಬಳಿಕ ಶ್ರೀಮತಿ ಸಾವಿತ್ರಿ ಮನೋಹರ್‌ರಾವ್‌ರವರು ಶಂಕರ ಪ್ರತಿಷ್ಠಾನದ ಪುನರುತ್ಥಾನದ ಮಹತ್ವ ಕುರಿತು ಸವಿವರವಾಗಿ ವಿಚಾರ ಮಂಡಿಸಿದರು. ಕಾರ್ಯದರ್ಶಿ ಶ್ರೀ ಸತೀಶ ಕುಮಾರ್ ಕೆಮ್ಮಣ್ಣು ಇವರು ಧನ್ಯವಾದವಿತ್ತರು. ಮಹಿಳಾ ವಿಭಾಗಕ್ಕೆ ಈ ಕೆಳಗಿನ ಪದಾಧಿಕಾರಿಗಳು ಆಯ್ಕೆಗೊಂಡರು.

ಶ್ರೀಮತಿ ಶೈಲಜಾ ರತ್ನಾಕರ ರಾವ್ (ಅಧ್ಯಕ್ಷರು), ಶ್ರೀಮತಿ ಸಾವಿತ್ರಿ ಮನೋಹರ ರಾವ್ (ಉಪಾಧ್ಯಕ್ಷರು), ಶ್ರೀಮತಿ ಶೈಲಜಾ ರಮೇಶ್ (ಕಾರ್ಯದರ್ಶಿ), ಶ್ರೀಮತಿ ಸೌಮ್ಯಾ ಭವಾನಿ ಶಂಕರ್ (ಜೊತೆ ಕಾರ್ಯದರ್ಶಿ), ಶ್ರೀಮತಿ ವಂದನಾ ಹರಿಶ್ಚಂದ್ರರಾವ್ (ಕೋಶಾಧಿಕಾರಿ) ಹಾಗೂ ಕಾರ್ಯಕಾರಿ ಸದಸ್ಯರಾಗಿ ಶ್ರೀಮತಿ ಶಶಿಕಲಾ ವಾಸುದೇವರಾವ್, ಶ್ರೀಮತಿ ಸೀತಾರತ್ನ ಶಿವರಾವ್, ಶ್ರೀಮತಿ ಅನಿತಾ ರಾಘವೇಂದ್ರ ರಾವ್, ಶ್ರೀಮತಿ ಪ್ರಭಾವತಿ ಕೃತಿವಾಸ ಶರ್ಮ ಇವರು ಆಯ್ಕೆಯಾದರು.

## ಮಾಂಗಲ್ಯಂ ತಂತುನಾನೇನ ....

ನಂದಳಿಕೆ ಶ್ರೀ ಜನಾರ್ದನರಾವ್ ಮತ್ತು ಶ್ರೀಮತಿ ರಾಜೇಶ್ವರಿಯವರ ಪುತ್ರಿ **ಪೂರ್ಣಿಮಾ** ಹಾಗೂ ಇನ್ನಾ ಶ್ರೀಮತಿ ವಿಜಯಲಕ್ಷ್ಮಿ ಮತ್ತು ಶ್ರೀ ಮೋಹನ್‌ದಾಸ್ ಇವರ ಪುತ್ರ **ಮಧುಕರ** ಇವರ ವಿವಾಹವು ತಾ.12-9-2010ರಂದು ಉಡುಪಿ ಕುಂಜಿಬೆಟ್ಟಿನ ಶ್ರೀಶಾರದಾ ಮಂಟಪದಲ್ಲಿ ನೆರವೇರಿತು.

## ನಿಧನ

### ಶ್ರೀ ಭಾಸ್ಕರ ರಾವ್

ಕೆಳಾರ್ಕಳಬೆಟ್ಟಿನಲ್ಲಿ ವಾಸ್ತವ್ಯವಿದ್ದ ಶ್ರೀ ಭಾಸ್ಕರ್ ರಾವ್(75 ವರ್ಷ) ಇವರು ತಾ.14-9-2010ರಂದು ತಮ್ಮ ನಿವಾಸದಲ್ಲಿ ನಿಧನರಾದರು. ಇವರು ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ ಹಾಗೂ ಅಪಾರ ಬಂಧುಬಳಗವನ್ನು ಅಗಲಿರುತ್ತಾರೆ.

### ಶ್ರೀಮತಿ ಸಾವಿತ್ರಮ್ಮ

ಕೊಡವೂರು ದಿ। ಶ್ರೀ ಪಿ.ವಿ.ರಾಯರ ಧರ್ಮಪತ್ನಿ ಶ್ರೀಮತಿ ಸಾವಿತ್ರಮ್ಮನವರು ತಾ.11-9-2010ರಂದು ತಮ್ಮ 85ನೇ ವಯಸ್ಸಿನಲ್ಲಿ ಕೊಡವೂರಿನ ತಮ್ಮ ಸ್ವಗೃಹದಲ್ಲಿ ನಿಧನರಾದರು. ಇವರು ಈರ್ವರು ಪುತ್ರರು, 4 ಜನ ಪುತ್ರಿಯರು ಹಾಗೂ ಅಪಾರ ಬಂಧುಬಳಗವನ್ನು ಅಗಲಿರುತ್ತಾರೆ.

### ಶ್ರೀ ವಿಠಲ ರಾವ್

ಉಡುಪಿ ಕೊರಂಗ್ರಪಾಡಿಯ ಶ್ರೀ ವಿಠಲ ರಾಯರು (68 ವರ್ಷ) ತಾ.12-9-2010ರಂದು ಕೊರಂಗ್ರಪಾಡಿಯ ತಮ್ಮ ಸ್ವಗೃಹದಲ್ಲಿ ನಿಧನರಾದರು. ಇವರು, ಪತ್ನಿ, ಓರ್ವ ಪುತ್ರ, ಮೂವರು ಪುತ್ರಿಯರು ಹಾಗೂ ಅಪಾರ ಬಂಧುಬಳಗವನ್ನು ಅಗಲಿರುತ್ತಾರೆ.

## ಶುಭಜನನ

ತಾ.28-09-2010ರಂದು ಅಂಬಲ್ಪಾಡಿಯ ಶ್ರೀ ಗಣೇಶ ಹೆಬ್ಬಾರ್, ಸಿ.ಎ. ಹಾಗೂ ಶ್ರೀಮತಿ ಆರತಿ ದಂಪತಿಗಳಿಗೆ ಹೆಣ್ಣು ಮಗುವಿನ ಜನನ.

ತಾ.05-10-2010ರಂದು ಬೆಳ್ಮಣ್ಣು ಬೈಲುಮನೆ ದೇವರಾಯ ಪುತ್ರ ಶರತ್‌ಕುಮಾರ್ ಹಾಗೂ ಶ್ರೀಮತಿ ನಿಶಾ ದಂಪತಿಗಳಿಗೆ ಗಂಡು ಮಗುವಿನ ಜನನ.

ತಾ.17-09-2010ರಂದು ಪುತ್ತೂರಿನ ವಿವೇಕಾನಂದ ಇಂಜಿನಿಯರಿಂಗ್ ಕಾಲೇಜಿನ ಪ್ರಾಧ್ಯಾಪಕ ಪ್ರಶಾಂತ್ ಕುಕ್ಕೇಹಳ್ಳಿ ಮತ್ತು ಶ್ರೀಮತಿ ಸುಮನ ದಂಪತಿಗಳಿಗೆ ಹೆಣ್ಣು ಮಗುವಿನ ಜನನ.

## ವಿಳಾಸ ಬದಲಾವಣೆ

**ಶಂಕರನಾರಾಯಣ ಹೆಬ್ಬಾರ್**
ರಿಟೈರ್ಡ್ ತಹಶೀಲ್ದಾರ್
106, ಗೌರಿಶಂಕರ, ಸಹ್ಯಾದ್ರಿನಗರ,
ಶಿವಮೊಗ್ಗ-577204.

**SRI VITTAL RAO A.**
2/7 Vidyasagar Avenue
V Zone, Durgapur 5
West Bengal.

**SRI ANANTHARAMA SHASTRY K.**
State Bank Manager, No.890/A,
Ist Floor, 3rd Main Road,
Diwanara Palya, Bangalore - 560 054.

**S. P. HEBBAR,**
House No.1, Ground Floor,
Ananda Nilaya, Mangesh Towers,
Sharada Mantap Road,
Kunjibettu, Udupi

## ಪಡುಬಿದ್ರಿ ಸ್ಥಾನಿಕ ಬ್ರಾಹ್ಮಣ ಸಭಾದ ಮಹಿಳಾ ವೇದಿಕೆಯ ಸಂಚಾಲಕಿಯಾಗಿ ನಂದಿಕೂರು ಶ್ರೀಮತಿ ಶುಭ ಜನಾರ್ಧನ ರಾವ್ ಆಯ್ಕೆ

ಪಡುಬಿದ್ರಿಯಲ್ಲಿ ನೂತನವಾಗಿ ಪ್ರಾರಂಭವಾದ ಸ್ಥಾನಿಕ ಬ್ರಾಹ್ಮಣ ಸಭಾ ಇದರ ಮಹಿಳಾ ವೇದಿಕೆಯನ್ನು ಸಂಘದ ಸಪ್ಟೆಂಬರ್ ತಿಂಗಳ ಸಭೆಯಲ್ಲಿ ರಚಿಸಲಾಯಿತು. ವೇದಿಕೆಯ ಸಂಚಾಲಕಿಯಾಗಿ ದೇವಿಕೃಪಾ ಏಜನ್ಸೀಸ್ ನಂದಿಕೂರು ಇದರ ಮಾಲಕರಾದ ಶ್ರೀ ಎಸ್. ಜನಾರ್ಧನ ರಾವ್ ಇವರ ಪತ್ನಿ ಶ್ರೀಮತಿ ಶುಭ ಜೆ. ರಾವ್‌ರವರು ಆಯ್ಕೆಯಾಗಿರುತ್ತಾರೆ.

## ಶ್ರೀಮತಿ ಎಮ್.ಕೆ. ಲಕ್ಷ್ಮೀಗೋಪಾಲಕೃಷ್ಣರಾವ್ ಸ್ಮರಣಾರ್ಥ ಪ್ರೋತ್ಸಾಹಧನ ವಿತರಣೆ

ಪಡುಬಿದ್ರಿ : ಸ್ಥಾನಿಕ ಬ್ರಾಹ್ಮಣ ಸಭಾ, ಪಡುಬಿದ್ರಿ ಇದರ ಉದ್ಘಾಟನಾ ಕಾರ್ಯಕ್ರಮದ ಸಮಾರಂಭದಲ್ಲಿ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ ವಿತರಿಸಲಾಯಿತು. ಕಾರ್ಯಕ್ರಮದ ಉದ್ಘಾಟಕರಾದ ಎಮ್.ಆರ್.ವಾಸುದೇವರಾವ್‌ರವರು ಪಡುಬಿದ್ರಿ ಸ್ಥಾನಿಕ ಬ್ರಾಹ್ಮಣ ಸಭಾದ ವ್ಯಾಪ್ತಿಗೆ ಒಳಪಟ್ಟ ಗ್ರಾಮದ ಇಂಜಿನಿಯರಿಂಗ್ ಕಲಿಯುವ 2 ಮಂದಿ, ಪಿಯುಸಿಯ 2 ಮಂದಿ ಮತ್ತು ಬಿ.ಎಡ್ ಕಲಿಯುವ 2 ಮಂದಿಗೆ ರೂ.35,000/- ಮೊತ್ತದ ಪ್ರೋತ್ಸಾಹಧನವನ್ನು ವಿತರಿಸಿದರು. ಈ ಪ್ರೋತ್ಸಾಹಧನವನ್ನು ಶ್ರೀಮತಿ ಎಮ್.ಕೆ. ಲಕ್ಷ್ಮೀಗೋಪಾಲಕೃಷ್ಣರಾವ್ ಸ್ಮರಣಾರ್ಥವಾಗಿ ವಿತರಿಸಲಾಯಿತು.

## ಅಂಬಲಪಾಡಿ ಕೃಷ್ಣರಾವ್ ಸ್ಮಾರಕ ವಿದ್ಯಾರ್ಥಿ ವೇತನ ನಿಧಿ

**''ಅಂಬಲಪಾಡಿ ಕೃಷ್ಣರಾವ್ ಸ್ಮಾರಕ ವಿದ್ಯಾರ್ಥಿ ವೇತನ ನಿಧಿ''ಗೆ ದೇಣಿಗೆ ನೀಡುವವರು ನಗದು, ಮನಿಆರ್ಡರ್ ಅಥವಾ ''ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಶ್ರೀ ಅಂಬಲಪಾಡಿ ಕೃಷ್ಣರಾವ್ ಸ್ಮಾರಕ ವಿದ್ಯಾರ್ಥಿ ವೇತನ ನಿಧಿ'' ಹೆಸರಿನಲ್ಲಿ ಚೆಕ್ ಅಥವಾ ಡ್ರಾಫ್ಟ್ ಮೂಲಕ ಕಳುಹಿಸಬೇಕೆಂದು ಕೋರಲಾಗಿದೆ.**

## ಶ್ರೀ ಎಲ್ಲೂರು ಲಕ್ಷ್ಮೀನಾರಾಯಣ ರಾವ್ ಜ್ಯೋತಿಷ್ಕ ಮೆಮೋರಿಯಲ್ ಚಾರಿಟೇಬಲ್ ಟ್ರಸ್ಟ್, ಕುಕ್ಕಿಕಟ್ಟೆ, ಉಡುಪಿ

### ವಿದ್ಯಾರ್ಥಿ ವೇತನ - ಅರ್ಜಿಆಹ್ವಾನ

ಶ್ರೀ ಎಲ್ಲೂರು ಲಕ್ಷ್ಮೀನಾರಾಯಣ ರಾವ್ ಜ್ಯೋತಿಷ್ಕ ಮೆಮೋರಿಯಲ್ ಚಾರಿಟೇಬಲ್ ಟ್ರಸ್ಟ್, ಕುಕ್ಕಿಕಟ್ಟೆ, ಉಡುಪಿ ಇದರ ವತಿಯಿಂದ ಕೊಡಲಾಗುವ ದಿ| ಡಾ| ವೈ. ಚಂದ್ರಶೇಖರ ರಾವ್ ಸ್ಮಾರಕ ವಿದ್ಯಾರ್ಥಿ ವೇತನಕ್ಕೆ ಇಂಜಿನಿಯರಿಂಗ್, ಪಾಲಿಟೆಕ್ನಿಕ್ ಹಾಗೂ ವೈದ್ಯಕೀಯ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಬಡ ಹಾಗೂ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರಾಶಸ್ತ್ಯ ನೀಡಲಾಗುವುದು. ಅರ್ಜಿಯನ್ನು ಬಿಳಿಹಾಳೆಯಲ್ಲಿ ತಮ್ಮ ವಿಳಾಸ, ಸಂಪರ್ಕ ಸಂಖ್ಯೆ (ಫೋನ್ ನಂ.) ಸಹಿತ ಬರೆದು, ಹಿಂದಿನ ವರ್ಷದ ಅಂಕಪಟ್ಟಿ, ಸ್ಟಡಿ ಸರ್ಟಿಫಿಕೇಟ್ ಹಾಗೂ ವರಮಾನದ ಪ್ರಮಾಣ ಪತ್ರದೊಂದಿಗೆ, ಈ ಕೆಳಗಿನ ವಿಳಾಸಕ್ಕೆ ತಾ.30-10-2010ರೊಳಗೆ ತಲುಪುವಂತೆ ಕಳುಹಿಸಬೇಕು.

**ಡಾ| ವೈ. ಸುದರ್ಶನ ರಾವ್, ಕೆನರಾ ಹೆಲ್ತ್ ಸೆಂಟರ್, ಅಂಜುಮಾನ್ ರಸ್ತೆ, ಸಿಟಿಬಸ್‌ಸ್ಟ್ಯಾಂಡ್ ಬಳಿ, ಉಡುಪಿ - 576 101.**

## ಪಡುಬಿದ್ರೆಯಲ್ಲಿ ನೂತನ ಸ್ಥಾನಿಕ ಸಭಾ ಉದ್ಘಾಟನೆ



ಪಡುಬಿದ್ರೆಯಲ್ಲಿ ನಮ್ಮ ಸಮಾಜ ಬಾಂಧವರ ಒಗ್ಗೂಡುವಿಕೆಗಾಗಿ ಸ್ಥಾನಿಕ ಬ್ರಾಹ್ಮಣ ಸಭಾ, ಪಡುಬಿದ್ರಿ ಇದರ ಉದ್ಘಾಟನಾ ಸಮಾರಂಭವು ತಾ.29-8-2010ರಂದು ಭಾನುವಾರ ಪಡುಬಿದ್ರೆಯ ನಂದಗೋಕುಲದಲ್ಲಿ ನೆರವೇರಿತು. ಬ್ರಾಹ್ಮಣ ಸಭಾದ ಗೌರವಾಧ್ಯಕ್ಷರಾದ ಶ್ರೀ ಟಿ. ವಿ. ವಾಸುದೇವರಾವ್ ಅವರ ಅಧ್ಯಕ್ಷತೆಯಲ್ಲಿ ನಡೆದ ಸಮಾರಂಭವನ್ನು ಮಂಗಳೂರು ವಿಮಾನ ನಿಲ್ದಾಣದ ನಿರ್ದೇಶಕರಾದ ಶ್ರೀ ಮಾರ್ಪಳ್ಳಿ ವಾಸುದೇವ ರಾಯರು ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟಿಸಿದರು.

ಅತಿಥಿಗಳಾಗಿ ಶ್ರೀ ಸತ್ಯಶಂಕರ ಬೊಳ್ಳಾವರ, ಧರ್ಮಾಧಿಕಾರಿಗಳು ಶೃಂಗೇರಿ ಮಠ; ಶ್ರೀಮತಿ ಸುಮಂಗಲಾ ಪ್ರಭಾಕರ್, ಸಂಚಾಲಕರು ಸಾಂಸ್ಕೃತಿಕ ಸಮಿತಿ ಸುಬ್ರಹ್ಮಣ್ಯ ಸಭಾ ಮಂಗಳೂರು; ಶ್ರೀ ವೇಣುಗೋಪಾಲ ರಾವ್, ನಿರ್ದೇಶಕರು, ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ ಉಡುಪಿ ಮೊದಲಾದವರು ಭಾಗವಹಿಸಿದ್ದರು.

ನಿವೃತ್ತ ಉಪನ್ಯಾಸಕರೂ, ಹಿರಿಯರೂ ಆದ ಶ್ರೀ ಸಾಂತೂರು ಸದಾಶಿವ ರಾಯರು ಅದ್ವೈತ ತತ್ವ ಬೋಧನೆಯ ಬಗ್ಗೆ ಸಂದರ್ಭೋಚಿತವಾಗಿ ಮಾತನಾಡಿದರು.

ಪ್ರಾರಂಭದಲ್ಲಿ ಸಭಾದ ಕಾರ್ಯದರ್ಶಿ ಶ್ರೀ ವೈ. ಸುದರ್ಶನರಾವ್ ಎಲ್ಲರನ್ನೂ ಸ್ವಾಗತಿಸಿದರು. ನಿರ್ದೇಶಕರಾದ ಯ.ಕೆ. ದಿವಾಕರ ರಾವ್ ಪ್ರಾಸ್ತಾವಿಕ ಭಾಷಣ ಮಾಡಿದರು. ಸಭಾದ ವ್ಯಾಪ್ತಿಯಲ್ಲಿರುವ ಸಮಾಜದ ಬಡ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ ವಿತರಣೆ ಮಾಡಲಾಯಿತು. ಕಾರ್ಯದರ್ಶಿ ಸುಧಾಕರ್ ಬೆಳ್ಳೆ ಧನ್ಯವಾದವಿತ್ತರು.

ಬೆಳಿಗ್ಗೆ 10 ಘಂಟೆಗೆ ಪ್ರಾರಂಭಗೊಂಡ ಈ ಕಾರ್ಯಕ್ರಮದಲ್ಲಿ ಸಮಾಜ ಬಾಂಧವರಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ಪ್ರದರ್ಶನಗೊಂಡಿತು. ನಂತರ ಜಗದಾಭಿರಾಮ ಸ್ವಾಮಿ, ಚಂದ್ರಕಾಂತ ಬೆಳ್ಳೆ, ದೇವಾನಂದ ಭಟ್ ಬೆಳುವಾಯಿ, ರೆಂಜಾಳ ರಾಮಕೃಷ್ಣಯ್ಯ ಮೊದಲಾದವರ ಕೂಡುವಿಕೆಯಿಂದ 'ಮಹಿಷಾಸುರಮರ್ದಿನಿ' ಯಕ್ಷಗಾನ ಬಯಲಾಟ ಪ್ರದರ್ಶನಗೊಂಡಿತು. ಬ್ರಾಹ್ಮಣ ಸುಹಾಸಿನಿ ಆರಾಧನೆಯೊಂದಿಗೆ ಅಂದಿನ ಕಾರ್ಯಕ್ರಮವು ಮುಕ್ತಾಯಗೊಂಡಿತು.


**ದೇವಿಕೃಪಾ ಏಜೆನ್ಸೀಸ್, ನಂದಿಕೂರು**

**ಫೋನ್ : 2556536 (R), 2555466 (O)**

**ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.**

**ಪ್ರೊ| ಎಸ್. ಜನಾರ್ದನ್ ರಾವ್**
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು

Rao's 'ಮಾತೃಛಾಯಾ'ರವರ

ಉಡುಪಿ ವಿಶಿಷ್ಟ ರುಚಿಯುಳ್ಳ

ಸಾರಿನ ಹಾಗೂ ಸಾಂಬಾರ್ ಮಸಾಲೆ, ಅಪ್ಪೆಮಿಡಿ ಹಾಗೂ ಮಿಡಿ ಉಪ್ಪಿನಕಾಯಿ ಹಪ್ಪಳ ಹಾಗೂ ಸೆಂಡಿಗೆಗಳು, ಶುದ್ಧ ದನದ ತುಪ್ಪ ಹಾಗೂ ಜೇನು ತುಪ್ಪ

-: ಮೊದಲಾದ ನಿತ್ಯೋಪಯೋಗಿ ವಸ್ತುಗಳಿಗೆ ಸಂದರ್ಶಿಸಿರಿ :-

**ಭಾರತ್ ಸ್ಟೋರ್ಸ್**

ರಥಬೀದಿ, ಉಡುಪಿ - 576 101. ಫೋನ್ : 2522444

ನಮ್ಮಲ್ಲಿ ಹೋಮ, ಹವನ ಇತ್ಯಾದಿ ಕಾರ್ಯಕ್ರಮಗಳನ್ನು ಅಚ್ಚುಕಟ್ಟಾಗಿ ನಡೆಸಿಕೊಡಲಾಗುವುದು ಹಾಗೂ (ಹೊರಗಿನ) ಮದುವೆ, ಉಪನಯನ ಇತ್ಯಾದಿ ವಿಶೇಷ ಸಮಾರಂಭಗಳಿಗೆ ಕ್ಯಾಟರಿಂಗ್ ವ್ಯವಸ್ಥೆಯನ್ನು ಮಾಡಲಾಗುವುದು.

ಸಂಪರ್ಕಿಸಿರಿ :

**ಕೆ. ರಾಮಮೂರ್ತಿ ಭಟ್,** ಪುರೋಹಿತರು

ಶಾರದಾ ಕೃಪಾ, ಆತ್ರಾಡಿ, ಉಡುಪಿ ತಾಲೂಕು. ಮೊಬೈಲ್ : 9448108010



**RAJESH POWER PRESS**

PRINTERS & PUBLISHERS

DARBE, PUTTUR, DA. KA. -574 202.
KARNATAKA STATE, SOUTH INDIA.

Ph :(08251) 231696, 231697 & 322386
E-mail :msraghunathrao@hotmail.com

**QUALITY FIRST AND ALWAYS**

ಎಮ್. ದೇವಾನಂದ್ ಭಟ್ Cell :9845644556

**ಶೋಭಾ ಡಿಜಿಟಲ್**
ಸ್ಟುಡಿಯೋ & ವೀಡಿಯೋ

ಉತ್ತಮ ಗುಣಮಟ್ಟದ ಫೋಟೋಗ್ರಾಫಿಗಾಗಿ ಸಂಪರ್ಕಿಸಿರಿ



ಬೆಳ್ವಾಯಿ-574213
(08258)-276177 (O), (918258)-324133 (O), 276777 (R)
ಎಡಪದವು - 574 164 (0824)-256374 (O) ಮಂಗಳೂರು, ದ.ಕ.

# ತುಳುನಾಡಿನಲ್ಲಿ ಬ್ರಾಹ್ಮಣ್ಯ

ದಿ। ಪ್ರೊ। ಗುರುರಾಜ ಭಟ್ಟರ ಕೃತಿಯಿಂದ ಸಂಗ್ರಹಿಸಿದ ಭಾಗ
ಸಂಗ್ರಹ : ಸಿ.ಎಸ್.ರಾವ್.

(ಹಿಂದಿನ ಸಂಚಿಕೆಯಿಂದ)

13) "ಶ್ರೀ ಗೋಕರ್ಣ ಪ್ರಭಾವ" ಎಂಬ ಚಿಕ್ಕ ಪುಸ್ತಕದಲ್ಲಿ ಸಾಂಪ್ರದಾಯಿಕ ನಂಬಿಕೆಯಿಂದ ಸ್ವಲ್ಪ ವಿಭಿನ್ನವಾದ, ಅಂತೂ ಚರಿತ್ರೆಗೆ ಸಾಮೀಪ್ಯವಿರುವ ನಿರ್ದೇಶವಿದೆ.

"ಇಲ್ಲಿಯ ಜನತೆಯು ವಿಷಯವಾಗಿ ಮುಖ್ಯವಾಗಿ ಕ್ಷೇತ್ರವಾದುದರಿಂದ ಬ್ರಾಹ್ಮಣರ ವಿಷಯವಾಗಿ ವಿಚಾರಿಸಿದರೆ ಅದು ಅಸ್ಪಷ್ಟವಾಗಿಯೇ ಉಂಟು. ಈ ಭಾಗದ ಇತರ ಸ್ಥಳಗಳಂತೆ ಇಲ್ಲಿಯೂ ಮೂಲತಃ ಬ್ರಾಹ್ಮಣರಿರಲಿಲ್ಲವೆಂದು ತಿಳಿಯುತ್ತದೆ. ವೈಜಯಂತಿ (ಈಗಿನ ಶಿರ್ಸಿ ತಾಲೂಕಿನ ಬನವಾಸಿ) ನಾಡಿನಲ್ಲಿ ಆಳುತ್ತಿದ್ದ ಕದಂಬ ವಂಶದ ಮಯೂರವರ್ಮನೆಂಬ ರಾಜನು ಒಮ್ಮೆ ಯಾತ್ರೆಗೆಂದು ಬಂದಾಗ ಇಲ್ಲಿ ಬ್ರಾಹ್ಮಣರ ವಸತಿಯೇ ಇಲ್ಲದೆ ಕೇವಲ ಬೇಡರೇ ಇದ್ದುದನ್ನು ಕಂಡು ಆತನಿಗೆ ವ್ಯಸನವಾಯಿತು. ಆತನು ಅಹಿಚ್ಛತ್ರಕ್ಕೆ ಹೋಗಿ ಅಲ್ಲಿ ಬ್ರಾಹ್ಮಣರನ್ನು ಪ್ರಾರ್ಥಿಸಿ ಯಥೇಚ್ಛದ್ರವ್ಯದಿಂದ ತೃಪ್ತಿಪಡಿಸಿ ಕೆಲವು ಕುಟುಂಬಗಳು ಇಲ್ಲಿ ನೆಲೆಸುವಂತೆ ಮಾಡಿ ಅವರಿಗೆ ಜೀವನೋಪಾಯಗಳನ್ನು ಕಲ್ಪಿಸಿಕೊಟ್ಟನು. ಅಂದಿನಿಂದ ಇಲ್ಲಿ ಪೂಜಾದಿ ವಿನಿಯೋಗಗಳು ನಡೆಯಹತ್ತಿದುವು. ಆದರೆ ಮಯೂರವರ್ಮನು ಕಾಲವಾದ ನಂತರ ಇಲ್ಲಿ ಅವ್ಯವಸ್ಥೆಯಾಗಿ ಕಳ್ಳರ ಪೀಡೆಯ ಮೂಲಕ ಈ ಬ್ರಾಹ್ಮಣ ಕುಟುಂಬಗಳು ಸ್ವದೇಶಕ್ಕೆ ಹೋಗಿಬಿಟ್ಟವು. ಮುಂದೆ ಮಯೂರನ ಮಗ ತ್ರಿನೇತ್ರ ಕದಂಬನು ಅಹಿಚ್ಛತ್ರದಿಂದ ಮತ್ತೆ ಕೆಲವು ಬ್ರಾಹ್ಮಣಕುಟುಂಬಗಳನ್ನು ತಂದು ಇಲ್ಲಿ ನೆಲೆಸುವಂತೆ ಮಾಡಲಿಕ್ಕೆ ಪ್ರಯತ್ನಿಸಿದನು. ಪುಂಡರ ಹಾವಳಿಯ ಮೂಲಕ ಈ ಯತ್ನ ಯಶಸ್ವಿಯಾಗಲಿಲ್ಲ. ಆಮೇಲೆ ಈ ಭಾಗದ ರಾಜನಾದ ಲೋಕಾದಿತ್ಯನು ಅಹಿಚ್ಛತ್ರದಿಂದ ಮತ್ತೆ ಏಳು ಗೋತ್ರದ 24 ಬ್ರಾಹ್ಮಣ ಕುಟುಂಬಗಳನ್ನು ಗೋಕರ್ಣದಲ್ಲಿಟ್ಟನು. ಹಿಂದಿನವರಂತೆ ಇವರು ತಮ್ಮ ದೇಶಕ್ಕೆ ಓಡಿ ಹೋಗದಂತೆ ಮುಂಜಾಗ್ರತೆ ವಹಿಸಿದನು. ಮುಂದೆ ವಿಜಯ ನಗರದ ಸಾಮ್ರಾಜ್ಯ ಕಾಲದಲ್ಲಿ ಮಂತ್ರಿಗಳಾದ ಮಾಧವಾಚಾರ್ಯರು ಇಲ್ಲಿಯ ಬ್ರಾಹ್ಮಣರು ದೇವ ಪೂಜಾದಿಗಳನ್ನು ವ್ಯವಸ್ಥಿತವಾಗಿ ಮಾಡಿಕೊಂಡಿರುವಂತೆ ಗಟ್ಟದ ಮೇಲಿನ ಭಾಗದ 'ದತ್ತ' ಹಾಕಿಕೊಟ್ಟ, ಇದು ಈಗಲೂ ವಸೂಲು ಬರುತ್ತಾ ಉಂಟು. ಈ ಭಾಗವು ಮೈಸೂರಿನ ಆಳ್ವಿಕೆಗೆ ಒಳಪಟ್ಟನಂತರ ಇಲ್ಲಿಯ ಬ್ರಾಹ್ಮಣರು ಕಾಲಕಾಲಕ್ಕೆ ಅಲ್ಲಿಯ ಕೆಳದಿ, ಬಿಳಗಿ ಮೊದಲಾದ ಸಂಸ್ಥಾನಿಕರ ಪರಿವಾರದಿಂದ ಪೂಜಾ ವಿನಿಯೋಗಗಳಿಗಾಗಿ ಉಂಬಳಿ ಪಡೆದು ಬರುತ್ತಿದ್ದರೆಂದು ತಿಳಿದು ಬರುತ್ತದೆ. ಈ ಪೂಜಾ ವಿನಿಯೋಗಗಳೇ 'ಉಪಾಧಿ' ಎಂದು ಹೆಸರು ಬಿದ್ದಿರಬೇಕು. ಹೀಗೆ ಉಪಾದಿ ಪಡೆದವರು 'ಉಪಾಧಿವಂತರು'.

ಮೇಲಿನ ವಿವರವು ಸಂಪ್ರದಾಯವನ್ನು ಬಿಟ್ಟಿಲ್ಲವಾದರೂ ಹಲಕೆಲವು ಸಂಪ್ರದಾಯಗಳಿಂದ ಚಾರಿತ್ರಿಕ ಸಂಗತಿಯನ್ನು ಎತ್ತಿ ಹಿಡಿಯಬಲ್ಲದು. ಉತ್ತರ ಕನ್ನಡದಲ್ಲಿ ಬ್ರಾಹ್ಮಣರನ್ನಿರಿಸಲು ಯಾವ ಋಷಿಯ ಪ್ರೇರಣೆಯು ಇರಲಿಲ್ಲವೆಂದೂ, ಮಯೂರವರ್ಮನು ತಾನಾಗಿಯೇ ಸ್ವಯಂ ಪ್ರೇರಿತನಾಗಿ ಬ್ರಾಹ್ಮಣರನ್ನು ತರಿಸಿದನೆಂದೂ, ಈ ಅರಸನಿಗೆ ವಿರೋಧಿಗಳೂ ಬೇಡರೆಂದೂ (ಬೇಡರೆಂದರೆ ಬಿಲ್ಲವರೇ) ಲೋಕಾದಿತ್ಯನು ಕದಂಬ ಕುಲಕ್ಕೆ ಸೇರಿದವನಲ್ಲವೆಂದೂ ಕೆಲವು ಸೂಚನೆಗಳು ಇದರಿಂದ ದೊರಕುತ್ತದೆ.

(ಮುಂದುವರಿಯುವುದು)

# ಡಾ। ಎ. ಪಿ.ಕೃಷ್ಣ -ಸಾಧನೆಗಳು



ಡಾ। ಎ.ಪಿ.ಕೃಷ್ಣ ಇವರು ನಿಟ್ಟೆ ವಿಶ್ವವಿದ್ಯಾಲಯದ ಉಪಕುಲಸಚಿವ (ಪರೀಕ್ಷಾಂಗ) Deputy Registrar (Evaluation) ಆಗಿ ನಿಯುಕ್ತಗೊಂಡಿರುತ್ತಾರೆ. ಕಾಸರಗೋಡಿನ ಪ್ರತಿಷ್ಠಿತ ಸ್ಥಾನಿಕ ಮನೆಗಳಲ್ಲೊಂದಾದ ಅನಂತಪುರದ ದಿ। ಶಂಕರನಾರಾಯಣಯ್ಯ ಮತ್ತು ದಿ। ರಾಧಮ್ಮನವರ ಪುತ್ರರಾಗಿ ಜನಿಸಿದ ಇವರಿಗೆ ನಾಲ್ವರು ಅಕ್ಕಂದಿರು ಮತ್ತು ಓರ್ವ ಅಣ್ಣ. ಕಾಸರಗೋಡಿನ ಶ್ರೀ ಶುಭಾಕರ್ ಶ್ಯಾನುಭೋಗ್ ಮತ್ತು ಶ್ರೀಮತಿ ರಾಜೇಶ್ವರಿಯವರ ಪುತ್ರಿ ಶ್ರೀಮತಿ ಸುಮನ್ ಇವರ ಜೀವನ ಸಂಗಾತಿ. ಈಕೆ ಭಾಷಾ ಪ್ರಾಧ್ಯಾಪಿಕೆ, ಇಬ್ಬರು ಮಕ್ಕಳು. 'ಅಲಕ' ಎಂ.ಬಿ.ಬಿ.ಎಸ್. ಪದವೀಧರೆ. ವಿವಾಹದ ಬಳಿಕ ತನ್ನ ಪತಿಯೊಂದಿಗೆ ಇಂಗ್ಲೆಂಡಿನಲ್ಲಿ ವಾಸ್ತವ್ಯ ಹಾಗೂ 'ಅಂಕಿತ' ಇಂಜಿನಿಯರಿಂಗ್ ವಿದ್ಯಾರ್ಥಿನಿ.

ವಿದ್ಯಾಭ್ಯಾಸ : ಕುಂಬಳೆ ಸರಕಾರಿ ಪ್ರೌಢಶಾಲೆಯಲ್ಲಿ ಎಸ್.ಎಸ್.ಎಲ್.ಸಿ.ಯಲ್ಲಿ ತಮ್ಮ ಶಾಲೆಯಲ್ಲೇ ಅತ್ಯಧಿಕ ಅಂಕದೊಂದಿಗೆ ಪ್ರಥಮ ಶ್ರೇಣಿಯಲ್ಲಿ ತೇರ್ಗಡೆ. ಕಾಸರಗೋಡು ಸರಕಾರಿ ಕಾಲೇಜಿನಿಂದ ಬಿಎಸ್ಸಿ ಪದವಿ. ಕಲ್ಲಿಕೋಟೆ ವಿಶ್ವವಿದ್ಯಾನಿಲಯದಿಂದ ಶರೀರ ಶಾಸ್ತ್ರ (physiology)ಯಲ್ಲಿ Distinction ಮತ್ತು ಪ್ರಥಮ ರ್‍ಯಾಂಕಿನೊಂದಿಗೆ ಎಂ.ಎಸ್ಸಿ ಪದವಿ. ಅದೇ ವಿಶ್ವವಿದ್ಯಾಲಯದಿಂದ ನರವಿಜ್ಞಾನ ಶಾಸ್ತ್ರದಲ್ಲಿ ಪಿ.ಎಚ್‌ಡಿ (Ph.D).

ವೃತ್ತಿಜೀವನ: ಮಹಾರಾಷ್ಟ್ರದ ಪ್ರವಾರ ಮೆಡಿಕಲ್ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ ಶೈಕ್ಷಣಿಕ ಸೇವೆ ಆರಂಭ. ಆಮೇಲೆ ವೃದ್ಧ ಮಾತಾಪಿತರಿಗೆ ಆಸರೆಯಾಗಿರಬೇಕೆಂಬ ಹಂಬಲದಿಂದ ಊರಿಗೆ ಹಿಂದಿರುಗಿ ಮಂಗಳೂರಿನಲ್ಲಿ ಆರಂಭಗೊಂಡ ಎ.ಬಿ.ಶೆಟ್ಟಿ ದಂತವೈದ್ಯಕೀಯ ಕಾಲೇಜಿನಲ್ಲಿ ಹಿರಿಯ ಉಪನ್ಯಾಸಕರಾಗಿ ಸೇರಿಕೊಂಡರು. ಮುಂದೆ ವಿವಿಧ ಪದೋನ್ನತಿಯೊಂದಿಗೆ ಫಿಸಿಯೋಲೊಜಿ ಮತ್ತು ಬಯೋಕೆಮಿಸ್ಟ್ರಿ ವಿಭಾಗದ ಕಾರ್ಯ ಮುಖ್ಯಸ್ಥರಾಗಿ ಸುದೀರ್ಘ ಸೇವೆ. ಕೆ.ಎಸ್.ಹೆಗ್ಡೆ ಮೆಡಿಕಲ್ ಅಕಾಡಮಿ ಪ್ರಾರಂಭಗೊಂಡಾಗ ಅಲ್ಲಿಗೆ ವರ್ಗಾವಣೆಗೊಂಡು ಶರೀರಶಾಸ್ತ್ರ ವಿಭಾಗದ ಪ್ರೊಫೆಸರ್ ಹಾಗೂ ಸಂಶೋಧನಾ ಮಾರ್ಗದರ್ಶಿ (ರಿಸರ್ಚ್ ಗೈಡ್) ಆಗಿ ಸೇವೆ ಸಲ್ಲಿಸುತ್ತಿದ್ದಾರೆ.

ವೃತ್ತಿ ಜೀವನದಲ್ಲಿ ಸಾಧನೆ: 'ಸುಮನ್ ಪಬ್ಲಿಕೇಶನ್' ಮಂಗಳೂರು ಎಂಬ ಸಂಸ್ಥೆ ಹುಟ್ಟು ಹಾಕಿ ತನ್ಮೂಲಕ ಹಲವಾರು ವೈದ್ಯಕೀಯ ಪುಸ್ತಕಗಳನ್ನು ಮುದ್ರಿಸಿ ಪರಿಚಯಿಸಿರುತ್ತಾರೆ. ಸ್ವತಃ ತಾವೇ ಬರೆದ ಭಾರತದ ಕೇಂದ್ರ ಸರಕಾರದಿಂದ ಮಾನ್ಯತೆ ಪಡೆದ ಎರಡು ವೈದ್ಯಕೀಯ ಪಠ್ಯಪುಸ್ತಕ ಸುಮಾರು 25,000ಕ್ಕೂ ಹೆಚ್ಚು ಪ್ರತಿಗಳು ದಕ್ಷಿಣ ಭಾರತದೆಲ್ಲೆಡೆ ಹಾಗೂ ಗುಜರಾತ್, ಮಹಾರಾಷ್ಟ್ರ, ರಾಜಸ್ಥಾನ ಪ್ರಾಂತ್ಯಗಳಲ್ಲೂ ಮಾರಾಟಗೊಂಡಿವೆ. ಒಂದು ಲಕ್ಷಕ್ಕೂ ಹೆಚ್ಚು ಓದುಗರ ಪ್ರಶಂಸೆಗೆ ಪಾತ್ರವಾಗಿದೆ.

ಇವರು ಬರೆದ ಹಲವಾರು ವೈಜ್ಞಾನಿಕ ಸಂಶೋಧನಾ ಪ್ರಬಂಧಗಳು ದೇಶೀಯ ಹಾಗೂ ಅಂತರ್ದೇಶೀಯ ಜರ್ನಲ್‌ಗಳಲ್ಲಿ ಪ್ರಕಟಗೊಂಡಿದೆ. 20ಕ್ಕೂ ಹೆಚ್ಚು ದೇಶೀಯ ವೈಜ್ಞಾನಿಕ ಸಮ್ಮೇಳನದಲ್ಲಿ ಪ್ರಬಂಧ ಮಂಡಿಸಿರುತ್ತಾರೆ. ಮಂಗಳೂರು, ಬೆಂಗಳೂರು, ಕಣ್ಣೂರು, ಕಲ್ಲಿಕೋಟೆ, ತಮಿಳುನಾಡುಗಳ ವೈದ್ಯಕೀಯ ವಿಶ್ವವಿದ್ಯಾಲಯ, ರಾಜೀವ್ ಗಾಂಧಿ ವೈದ್ಯಕೀಯ ವಿದ್ಯಾಲಯಗಳಲ್ಲಿ ಎಂಬಿಬಿಎಸ್, ಬಿಡಿಎಸ್, ಪಿಎಚ್‌ಡಿ, ಬಿಎಸ್ಸಿ, ಎಂಎಸ್ಸಿ, ಬಿಪಿಟಿ, ಮುಂತಾದ ಕೋರ್ಸುಗಳಿಗೆ ಮುಖ್ಯ ಪರೀಕ್ಷಕರಾಗಿ ಅನುಭವ. ಕೇಲಿಕಟ್ ವಿಶ್ವವಿದ್ಯಾಲಯದ 'ಫೇಕಲ್ಟಿ ಆಫ್ ಸಯನ್ಸ್'ನ ಸದಸ್ಯ. ಹಾಗೂ 'ಫಿಸಿಯೋಲಜಿ ಬೋರ್ಡ್ ಆಫ್ ಸ್ಟಡಿಸ್'ನ ಚೇರ್‌ಮೆನ್ ಆಗಿದ್ದಾರೆ. ಹಲವಾರು ವಿದ್ಯಾಸಂಸ್ಥೆಗಳಿಗೆ ಗೌರವ ಸಲಹೆಗಾರರಾಗಿ ವಿದ್ಯಾಭ್ಯಾಸದ ಪುರೋಗತಿಗೆ ಹಾಗೂ ವಿದ್ಯಾಗುಣಮಟ್ಟ ಕಾಯ್ದುಕೊಳ್ಳಲು ನಿರಂತರ ಕೊಡುಗೆಯನ್ನೀತಿದ್ದಾರೆ. ಅಪಾರ ಸಂಖ್ಯೆಯ ವಿದ್ಯಾರ್ಥಿಗಳ ಪ್ರೀತಿ ಪಾತ್ರರಾಗಿರುತ್ತಾರೆ.

ಧಾರ್ಮಿಕ, ಸಾಮಾಜಿಕ ರಂಗ: ಪೆರ್ಣೆ ಮುಚ್ಚಿಲೋಟ್ ಭಗವತೀ ಕ್ಷೇತ್ರದೊಂದಿಗೆ ಅನುವಂಶಿಕ ಭಾವನಾತ್ಮಕ ಸಂಬಂಧ. ಕಾಸರಗೋಡು ಶಿವಬ್ರಾಹ್ಮಣ ಸಂಘದ ಸದಸ್ಯ. ಮಂಗಳೂರು ಶ್ರೀ ಸುಬ್ರಹ್ಮಣ್ಯ ಸಭಾದ ಸಕ್ರಿಯ ನಿರ್ದೇಶಕರಾಗಿ ಕೆಲವು ವರ್ಷದಿಂದ ದುಡಿಮೆ. ಈಗ ಶ್ರೀಸಭಾದ ಉಪಾಧ್ಯಕ್ಷರಾಗಿ ನೇಮಕ. ಶತಮಾನೋತ್ಸವ ಸಮಿತಿಯ ಕಾರ್ಯದರ್ಶಿಯಾಗಿದ್ದು ಸಾರಥ್ಯ.

ಪ್ರಸ್ತುತ ಜವಾಬ್ದಾರಿ: KS Hegde medical ಕಾಲೇಜಿನಲ್ಲಿ ಮತ್ತು ABSMIDS ಇದರಲ್ಲಿ ಪ್ರಾಧ್ಯಾಪಕತನ ಇದರೊಂದಿಗೆ ನಿಟ್ಟೆ ವಿಶ್ವವಿದ್ಯಾನಿಲಯದ ಪರೀಕ್ಷಾಂಗದ ಸಂಪೂರ್ಣ ಮೇಲ್ನೋಟ.

ಪ್ರಸ್ತುತ 2 ಪಿಎಚ್‌ಡಿ ವಿದ್ಯಾರ್ಥಿಗಳಿಗೆ ನರ ವಿಜ್ಞಾನ ವಿಷಯದಲ್ಲಿ ಮಾರ್ಗದರ್ಶಕರಾಗಿರುತ್ತಾರೆ. ಈ ಮೂಲಕ ವೃದ್ಧಾಪ್ಯ ಸಹಜ ವಾದ 'ಪಾರ್ಕಿನ್‌ಸೋನಿಸಂ (parkinsomism) ಎಂಬ ನರರೋಗ ಪೀಡಿತರ ಕಷ್ಟವನ್ನು ಕಡಿಮೆಗೊಳಿಸುವ ನಿಟ್ಟಿನಲ್ಲಿ ಸಂಶೋಧನಾ ಪ್ರಯತ್ನ-ಇವರ ಈಗಿನ ವೃತ್ತಿ ಸಂಬಂಧಿಸಿದ ಆಕಾಂಕ್ಷೆ (Professional Goal). ಡಾ। ಎ.ಪಿ.ಕೃಷ್ಣ ಇವರ ವಿಶೇಷ ಸಾಧನೆಗಾಗಿ ಶ್ರೀಶಾರದಾ ಬಳಗದ ಶುಭ ಹಾರೈಕೆಗಳು.

# ಶ್ರೀ ಸುಬ್ರಹ್ಮಣ್ಯ ಸಹಕಾರ ಸಂಘ-೭೩ನೇ ವಾರ್ಷಿಕ ಮಹಾಸಭೆ

ತಾ.26-09-2010 ಆದಿತ್ಯವಾರ ಶ್ರೀ ಸುಬ್ರಹ್ಮಣ್ಯ ಸಹಕಾರ ಸಂಘ (ರಿ.) ಬಿಜೈ ರಸ್ತೆ, ಮಂಗಳೂರು ಇದರ 73ನೇ ವಾರ್ಷಿಕ ಮಹಾಸಭೆಯು ಶ್ರೀ ಸುಬ್ರಹ್ಮಣ್ಯ ಸಭೆಯ ಶತಮಾನೋತ್ಸವ ಭವನದಲ್ಲಿ ನಡೆಯಿತು. ಪ್ರಾರ್ಥನೆಯೊಂದಿಗೆ ಆರಂಭಗೊಂಡ ಈ ಸಭೆಗೆ ಆಗಮಿಸಿದ ಎಲ್ಲರನ್ನೂ ಅಧ್ಯಕ್ಷರಾದ ಶ್ರೀ ಕರುಣ್‌ರಾವ್ ಬೆಳ್ಳೆಯವರು ಆತ್ಮೀಯವಾಗಿ ಸ್ವಾಗತಿಸಿದರು. ಸಂಘದ ವಾರ್ಷಿಕ ಲೆಕ್ಕಪತ್ರಗಳನ್ನು ಕಾರ್ಯದರ್ಶಿ ಮಮತ ಆರ್.ರಾವ್‌ರವರು ಮಂಡಿಸಿದರು. ಸಂಘದ ವಾರ್ಷಿಕ ವರದಿಯನ್ನು ಸಂಘದ ನಿರ್ದೇಶಕರಲ್ಲೊಬ್ಬರಾದ ಶ್ರೀ ಅನಿಲ್ ರಾವ್ ಬಿ.ಎಸ್.ರವರು ಓದಿದರು.

ಸಂಘದ ಉಪಾಧ್ಯಕ್ಷರಾದ ಶ್ರೀ ಎಮ್.ಎಸ್. ರಘುನಾಥ್‌ರಾವ್‌ರವರು ಸಂಘದ ಏಳಿಗೆಗೆ ಸದಸ್ಯರ ಮಹತ್ವದ ಬಗ್ಗೆ ಮಾತನಾಡಿ ಅವರ ಸಂಪೂರ್ಣ ಬೆಂಬಲವನ್ನು ಕೋರಿದರು. ಹಿರಿಯ ಸದಸ್ಯರುಗಳಾದ ಶ್ರೀ ಎಂ.ಆರ್. ವಾಸುದೇವ್, ಡಾ। ಎ.ಪಿ.ಕೃಷ್ಣ ಮೊದಲಾದವರು ಸಂಘದ ಚಟುವಟಿಕೆಯ ಬಗ್ಗೆ ಸಂತೋಷ ಹಾಗೂ ಬೆಂಬಲವನ್ನು ವ್ಯಕ್ತಪಡಿಸಿದರು. ಸಂಘವು ತನ್ನ ಸದಸ್ಯರಿಗೆ 2008-09ನೇ ಸಾಲಿಗೆ 10% ಡಿವಿಡೆಂಡ್ ನೀಡಿರುವುದನ್ನು ಸದಸ್ಯರೆಲ್ಲರೂ ಸ್ವಾಗತಿಸಿದರು. ಅಧ್ಯಕ್ಷರ ದಿಕ್ಸೂಚಿ ಭಾಷಣದಲ್ಲಿ ಸಂಘವು ಆಲೋಚಿಸಿರುವ ಮುಂದಿನ ಕಾರ್ಯಕ್ರಮಗಳ ಬಗ್ಗೆ ತಿಳಿಸಿದರು. ಸಂಘದ ಗೌರವ ಸಲಹೆಗಾರರಾದ ಶ್ರೀ ಟಿ. ಮೋಹನ್ ರಾವ್‌ರವರ ಧನ್ಯವಾದ ಸಮರ್ಪಣೆಯೊಂದಿಗೆ ಸಭೆಯು ಮುಕ್ತಾಯಗೊಂಡಿತು. ಈ ಸಂದರ್ಭದಲ್ಲಿ ಶ್ರೀ ಸುಬ್ರಹ್ಮಣ್ಯ ಸಭಾದ ವತಿಯಿಂದ ಶ್ರೀ ಸತ್ಯನಾರಾಯಣ ಪೂಜೆಯನ್ನು ಆಯೋಜಿಸಲಾಗಿತ್ತು.

# ಈಶ್ವರಮಂಗಲ ಸರೋಜಿನಿ ಕೆ.-ಜಿಲ್ಲಾಮಟ್ಟದ ಉತ್ತಮ ಶಿಕ್ಷಕಿ ಪ್ರಶಸ್ತಿ



ದ.ಕ.ಜಿಲ್ಲೆಯ ಪುತ್ತೂರು ತಾಲೂಕು ಈಶ್ವರಮಂಗಲದಲ್ಲಿ ವಾಸವ್ಯವಿರುವ ವಿ. ನಾಗಪ್ಪಯ್ಯ, ನಿವೃತ್ತ ಮುಖ್ಯಶಿಕ್ಷಕರು ಇವರ ಪತ್ನಿ ಶ್ರೀಮತಿ ಸರೋಜಿನಿ ಕೆ., ಮುಖ್ಯೋಪಾಧ್ಯಾಯಿನಿ, ಮೇನಾಲ ಪುತ್ತೂರು ತಾಲೂಕು ಇವರು ತಾ.5-9-2010ರಂದು ಮಂಗಳೂರಿನಲ್ಲಿ ನಡೆದ ಜಿಲ್ಲಾಮಟ್ಟ ಶಿಕ್ಷಕ ದಿನಾಚರಣೆಯ ಸನ್ಮಾನ ಸಮಾರಂಭದಲ್ಲಿ ಈ ವರ್ಷದ "ಜಿಲ್ಲಾಮಟ್ಟದ ಉತ್ತಮ ಶಿಕ್ಷಕ ಪ್ರಶಸಿ"ಯನ್ನು ಪಡೆದುಕೊಂಡಿದ್ದಾರೆ.


ಹಲವು ಸರಕಾರಿ ಶಾಲೆಗಳಲ್ಲಿ ಸುಮಾರು 38 ವರ್ಷಗಳಿಂದ ಸೇವೆ ಸಲ್ಲಿಸುತ್ತಾ ಉತ್ತಮ ಶಿಕ್ಷಕಿಯಾಗಿ ಗುರುತಿಸಿಕೊಂಡಿದ್ದ ಇವರು ಮಕ್ಕಳ ವ್ಯಕಿತ್ವ ವಿಕಸನ ಕಾರ್ಯಾಗಾರಗಳನ್ನು ನಡೆಸಿ ವಿವಿಧ ಶೈಕ್ಷಣಿಕ ಚಟುವಟಿಕೆಗಳಲ್ಲಿ ಗುರುತಿಸಿಕೊಂಡಿದ್ದಾರೆ. ಸಮುದಾಯದ ಸಂಪನ್ಮೂಲಗಳನ್ನು ಕ್ರೋಢೀಕರಿಸಿ ನನ್ಯ ಹಿರಿಯ ಪ್ರಾಥಮಿಕ ಶಾಲೆ ಸಾಗೂ ಮೇನಾಲ ಹಿರಿಯ ಪ್ರಾಥಮಿಕ ಶಾಲೆ ಹೀಗೆ ಎರಡು ಶಾಲೆಗಳಲ್ಲಿ ಸುವರ್ಣ ಮಹೋತ್ಸವ ನಡೆಸಿದ್ದಾರೆ. ಸರೋಜಿನಿ ಕೆ. ಅವರ ವಿಶೇಷ ಸಾಧನೆಗಾಗಿ ಶ್ರೀಶಾರದಾ ಬಳಗದ ಶುಭ ಹಾರೈಕೆಗಳು.

# ಶ್ರೀಮತಿ ಕೃಷ್ಣವೇಣಿ - ಉತ್ತಮ ಶಿಕ್ಷಕಿ ಪ್ರಶಸ್ತಿ



ಶ್ರೀಮತಿ ಕೃಷ್ಣವೇಣಿ, ಶಿಕ್ಷಕಿ ಇವರು 2009-10ನೇ ಸಾಲಿನ ಉಡುಪಿ ಜಿಲ್ಲಾ ಅನುದಾನರಹಿತ ಶಾಲಾ ಉತ್ತಮ ಶಿಕ್ಷಕಿ ಪ್ರಶಸ್ತಿಯನ್ನು ಪಡೆದಿರುತ್ತಾರೆ. ಸಪ್ಟೆಂಬರ್ 5, ಶಿಕ್ಷಕ ದಿನಾಚರಣೆಯ ದಿನದಂದು ಶ್ಯಾಮಿಲಿ ಸಭಾಂಗಣದಲ್ಲಿ ನಡೆದ ಸಮಾರಂಭದಲ್ಲಿ ಈ ಪ್ರಶಸ್ತಿಯನ್ನು ಸ್ವೀಕರಿಸಿದರು. ಇವರು ಕುಂದಾಪುರ ವಲಯ ಸಿದ್ದಾಪುರದ ಸರಸ್ವತಿ ವಿದ್ಯಾಮಂದಿರ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಇವರು ಶ್ರೀ ಸುರೇಶ್ ಭಟ್ ಇವರ ಧರ್ಮಪತ್ನಿ. ಶ್ರೀಮತಿ ಕೃಷ್ಣವೇಣಿಯವರ ಸಾಧನೆಗೆ ಶ್ರೀಶಾರದಾ ಅಭಿನಂದನೆಗಳು.

# ಅಂಜನಾ ರಾವ್ ಕೆ.



ಮಂಗಳೂರು ವಿಶ್ವವಿದ್ಯಾನಿಲಯ ಕಳೆದ ನವೆಂಬರ್-2009ರಲ್ಲಿ ನಡೆಸಿದ ಬಿ.ಎಡ್ ಪಬ್ಲಿಕ್ ಪರೀಕ್ಷೆಯಲ್ಲಿ ಬೆಳ್ತಂಗಡಿ ತಾಲೂಕಿನ ಉಜಿರೆ ಎಸ್.ಡಿ.ಎಂ. ಶಿಕ್ಷಣ ಮಹಾವಿದ್ಯಾಲಯದ ವಿದ್ಯಾರ್ಥಿನಿ ಅಂಜನಾ ರಾವ್ ಕೆ. ಶೇ.82.9 ಅಂಕಗಳನ್ನು ಪಡೆದು ಚತುರ್ಥ ರ್‍ಯಾಂಕ್ ಗಳಿಸಿದ್ದಾರೆ. ಪ್ರಸುತ ಇವರು ಉಜಿರೆ ಎಸ್.ಡಿ.ಎಂ. ಆಂಗ್ಲ ಮಾಧ್ಯಮ ಪ್ರೌಢಶಾಲೆಯಲ್ಲಿ ಅಧ್ಯಾಪಕಿಯಾಗಿ ಸೇವೆ ಸಲ್ಲಿಸುತಿದ್ದಾರೆ. ಇವರು ಬಿ.ಎಸ್ಸಿ (ಪಿ.ಸಿ.ಎಂ.) ಪದವಿ ಶಿಕ್ಷಣವನ್ನು ಕಾರ್ಕಳ ಶ್ರೀ ಭುವನೇಂದ್ರ ಕಾಲೇಜಿನಲ್ಲಿ ಪೂರೈಸಿದ್ದು 90% ಅಂಕ ಪಡೆದು ವಿಶಿಷ್ಟ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದರು. ಇವರು ಕೊಕ್ರಾಡಿ ಶ್ರೀ ಸುಬ್ರಹ್ಮಣ್ಯ ಕೆ.ರಾವ್ (ಬ್ರಾಂಚ್ ಪೋಸ್ಟ್ ಮಾಸ್ಟರ್, ತೋಕೂರು) ಮತ್ತು ಶ್ರೀಮತಿ ಶಕುಂತಲಾ ಕೆ. (ಅಧ್ಯಾಪಕಿ ನಾವರಶಾಲೆ) ಇವರ ಪುತ್ರಿಯಾಗಿರುತ್ತಾರೆ. ಇವರ ಸಾಧನೆಗೆ ಶ್ರೀಶಾರದಾ ಬಳಗದ ಅಭಿನಂದನೆಗಳು.

## ಅಭಿನಂದನೆ

### ಕು| ಸಹನಾ ಪಿ. ರಾವ್



2009-10ನೇ ಸಾಲಿನ ಪಿಯುಸಿ ಪರೀಕ್ಷೆಯಲ್ಲಿ ಸಹನಾ ಪಿ.ರಾವ್ ಇವರು 563 (ಶೇ.93.83) ಅಂಕಗಳನ್ನು ಗಳಿಸಿ ವಿಶೇಷ ಶ್ರೇಣಿಯಲ್ಲಿ ತೇರ್ಗಡೆ ಯಾಗಿರುತ್ತಾಳೆ. ಇವಳು ಉಡುಪಿ ಪೂರ್ಣಪ್ರಜ್ಞ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿನಿ. ಇವಳು ಚಿಟ್ಪಾಡಿ ಶ್ರೀ ಎಸ್. ಪ್ರಭಾಕರ ರಾವ್ ಮತ್ತು ಶ್ರೀಮತಿ ಪಿ. ನಿರ್ಮಲ ರಾವ್ ಇವರ ಪುತ್ರಿ. ಪ್ರಸ್ತುತ ನಿಟ್ಟೆ ಇಂಜಿನಿಯರಿಂಗ್ ಕಾಲೇಜಿನಲ್ಲಿ ಈಕೆ ಪ್ರಥಮ ಬಿ.ಇ. (EE)ಯಲ್ಲಿ ತನ್ನ ವ್ಯಾಸಂಗ ಮುಂದುವರಿಸಿರುತ್ತಾಳೆ. ಇವಳ ಸಾಧನೆಗೆ ಶ್ರೀಶಾರದಾ ಬಳಗದ ಅಭಿನಂದನೆಗಳು.

### ಕು| ಸಹನಾ ರಾವ್



2010ರ ಮೇ ತಿಂಗಳಿನಲ್ಲಿ ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿಯು ನಡೆಸಿದ ಭರತನಾಟ್ಯ ಪರೀಕ್ಷೆಯ ಜೂನಿಯರ್ ವಿಭಾಗದಲ್ಲಿ ಶೇಕಡಾ 90 ಅಂಕಗಳೊಂದಿಗೆ ವಿಶಿಷ್ಟಶ್ರೇಣಿಯಲ್ಲಿ ತೇರ್ಗಡೆಯಾಗಿರುವ ಕು| ಸಹನಾ ರಾವ್ ಪುತ್ತೂರಿನ ವಿವೇಕಾನಂದ ಆಂಗ್ಲ ಮಾಧ್ಯಮ ಪ್ರೌಢಶಾಲೆಯ 8ನೇ ತರಗತಿಯ ವಿದ್ಯಾರ್ಥಿನಿ. ಇವರು ಸಂತ ಫಿಲೋಮಿನಾ ಕಾಲೇಜಿನ ಸಹ ಪ್ರಾಧ್ಯಾಪಕ ಪ್ರೊ| ದಿನಕರ ರಾವ್ ಮತ್ತು ಶ್ರೀಮತಿ ವಾಣಿ ಇವರ ಸುಪುತ್ರಿ ಹಾಗೂ ಬಾರ್ಕೂರು-ಪಳ್ಳಿಗುಡ್ಡೆ ಶ್ರೀ ನಾರಾಯಣ ರಾವ್ ಮತ್ತು ಶ್ರೀಮತಿ ಸಾವಿತ್ರಮ್ಮ ಇವರ ಪೌತ್ರಿ. ಕು| ಸಹನಾಳ ಸಾಧನೆಗೆ ಶ್ರೀಶಾರದಾ ಬಳಗದ ಅಭಿನಂದನೆಗಳು.

### ಕು| ಹರ್ಷಿತಾ ಹರೀಶ ಶಾಸ್ತ್ರಿ



ಕರ್ನಾಟಕ ಪ್ರೌಢಮಂಡಳಿಯವರು ನಡೆಸಿರುವ ಮೇ 2010ರ ಸಾಲಿನ ಕರ್ನಾಟಕ ಸಂಗೀತ ಜ್ಯೂನಿಯರ್ ಗ್ರೇಡ್ ಪರೀಕ್ಷೆಯಲ್ಲಿ ಕು| ಹರ್ಷಿತಾ ಹರೀಶ ಶಾಸ್ತ್ರಿ 314 (78.5%) ಅಂಕಗಳಿಸಿ ಪ್ರಥಮ ದರ್ಜೆಯಲ್ಲಿ ಹಾಗೂ ಕ್ಲಾಸಿಗೆ ಎರಡನೇ ಸ್ಥಾನ ಪಡೆದಿರುತ್ತಾಳೆ. ಈಕೆ ಸ್ವರಭಾರತಿ ಸಂಗೀತ ಶಾಲೆ ಧಾರವಾಡ ಶಾಖೆಯ ಸಂಗೀತ ವಿದುಷಿ ಶ್ರೀಮತಿ ಶ್ರೀವಲ್ಲಿ ಲೋಕೇಶರವರ ಶಿಷ್ಯೆ. ಈಕೆ ಧಾರವಾಡದ ದಿ| ಹರೀಶ ಆರ್.ಶಾಸ್ತ್ರಿ ಹಾಗೂ ಶ್ರೀಮತಿ ಗೀತಾ ಹರೀಶ ಶಾಸ್ತ್ರಿ ಇವರ ಏಕಮಾತ್ರ ಪುತ್ರಿ ಹಾಗೂ ಧಾರವಾಡದ ಶ್ರೀಮತಿ ಪ್ರೇಮಾ ಆರ್.ಶಾಸ್ತ್ರಿ ಹಾಗೂ ಬೆಂಗಳೂರಿನ ವಿಜಯನಗರದ ಶ್ರೀಮತಿ ಯಶೋಧಾ ವಿ.ಶಾನಭಾಗ ಇವರ ಮೊಮ್ಮಗಳು. ಸದ್ಯ 8ನೇ ತರಗತಿಯಲ್ಲಿ ಅಭ್ಯಸಿಸುತ್ತಿರುವ ಈಕೆ ಧಾರವಾಡದ ಪ್ರಜಂಟೇಶನ್ ಬಾಲಕಿಯರ ಪ್ರೌಢಶಾಲೆಯ ವಿದ್ಯಾರ್ಥಿನಿ. ಇವಳಿಗೆ ಶ್ರೀಶಾರದಾ ಬಳಗದ ಅಭಿನಂದನೆಗಳು.

### ಕು| ಅಪೇಕ್ಷಾ



ಧಾರವಾಡದ ಎಸ್.ಡಿ.ಎಂ. ಆಂಗ್ಲ ಮಾಧ್ಯಮ ಪ್ರೌಢಶಾಲೆಯಲ್ಲಿ ಒಂಭತ್ತನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಕು| ಅಪೇಕ್ಷಾ ಎಂ.ಆರ್. ಇವಳು 2010ನೇ ಸಾಲಿನಲ್ಲಿ ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿಯವರು ನಡೆಸಿದ ಜ್ಯೂನಿಯರ್ ಸಂಗೀತ ಪರೀಕ್ಷೆಯಲ್ಲಿ ಶೇ.70ರಷ್ಟು ಅಂಕಪಡೆದು ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣ ಹೊಂದಿರುತ್ತಾಳೆ. ಈಕೆ ಧಾರವಾಡದ ನಿವಾಸಿಯಾಗಿರುವ ಮಾಧವ ಪಿ.ರಾವ್ ಹಾಗೂ ಜೆ.ಎಸ್.ಎಸ್. ಪ್ರಾಥಮಿಕ ಶಾಲೆಯ ಮುಖ್ಯಾಧ್ಯಾಪಿಕೆಯಾದ ಶ್ರೀಮತಿ ಸುಧಾಮಣಿ ರಾವ್ ಇವರ ಪುತ್ರಿ. ಇವರ ಈ ಸಾಧನೆಗೆ ಶ್ರೀಶಾರದಾ ಬಳಗದ ಅಭಿನಂದನೆಗಳು.

### ಶ್ರೇಯಸ್ ಜೆ. ರಾವ್



### ಉನ್ನತ ವ್ಯಾಸಂಗಕ್ಕಾಗಿ ವಿದೇಶ ಪ್ರಯಾಣ

ಬೆಂಗಳೂರಿನಲ್ಲಿ ವಿದೇಶಿ ಕಂಪೆನಿಯಲ್ಲಿ ಎಂಜಿನಿಯರ್ ಆಗಿದ್ದ ಶ್ರೀಯುತ ಶ್ರೇಯಸ್ ಜೆ. ರಾವ್ ಅವರು ಸ್ನಾತಕೋತ್ತರ (M.S. Electronics) ವಿದ್ಯಾಭ್ಯಾಸಕ್ಕಾಗಿ ಅಮೆರಿಕದ ಟೆಕ್ಸಾಸ್ ಟೆಕ್ ವಿಶ್ವವಿದ್ಯಾಲಯಕ್ಕೆ ಇತ್ತೀಚೆಗೆ ಪ್ರಯಾಣ ಬೆಳೆಸಿದ್ದಾರೆ. ವಿದೇಶಿ ವಿಶ್ವವಿದ್ಯಾಲಯದ ವಿದ್ಯಾರ್ಥಿವೇತನ ಪಡೆದ ಕೆಲವೇ ವಿದ್ಯಾರ್ಥಿಗಳಲ್ಲಿ ಒಬ್ಬರಾದ ಇವರು ಬೆಂಗಳೂರಲ್ಲಿ ಉದ್ಯೋಗದಲ್ಲಿರುವ ಶ್ರೀಯುತ ಚಿತ್ರಾಪುರ ಜಗನ್ನಾಥರಾವ್ ಮತ್ತು ಶ್ರೀಮತಿ ಪೂರ್ಣಿಮ ರಾವ್ ದಂಪತಿಗಳ ಸುಪುತ್ರ ಹಾಗೂ ಪುತ್ತೂರು ನೆಹರೂ ನಗರದಲ್ಲಿರುವ ಪ್ರೊ| ಎಸ್.ಆರ್.ಜೋಶಿ ಮತ್ತು ಶ್ರೀಮತಿ ಮಹಾಲಕ್ಷ್ಮೀ ಜೋಶಿಯವರ ಪೌತ್ರ. ಶ್ರೇಯಸ್ ಅವರ ಸಾಧನೆಗೆ ಶ್ರೀಶಾರದಾ ಬಳಗದ ಅಭಿನಂದನೆಗಳು.

### ಸೀಮಂತೋನ್ನಯನ

ಕಾರ್ಕಳದ ಶುಂಠಿಪಾಡಿ ಶ್ರೀ ವಿ. ಮನೋಹರ ರಾವ್ ಮತ್ತು ರಾಜ್ಯಪ್ರಶಸ್ತಿ ವಿಜೇತ ಪ್ರೌಢಶಾಲಾ ಮುಖ್ಯೋಪಾಧ್ಯಾಯಿನಿ ಶ್ರೀಮತಿ ಮನೋಹರ್ ರಾವ್ ಇವರ ಸುಪುತ್ರ ಲೆಫ್ಟಿನೆಂಟ್ ಕಮಾಂಡರ್ ಶ್ರೀ ಅಶ್ವಿನ್ ಎಂ.ರಾವ್, ಎಂ.ಟೆಕ್ ಅವರ ಪತ್ನಿ ಶ್ರೀಮತಿ ಯಶಸ್ವಿನಿ ಎ.ರಾವ್ ಇವರ ಸೀಮಂತೋನ್ನಯನ ಸಂಭ್ರಮ ಅವರ ಸ್ವಗೃಹದಲ್ಲಿ ಅದ್ದೂರಿಯಾಗಿ ತಾ.29-9-2010ರಂದು ನೆರವೇರಿತು.

## ವೈದ್ಯಕೀಯ ವೇದಿಕೆ-ಪ್ರಶ್ನೆ ಮತ್ತು ಉತ್ತರ

**ಡಾ| ವೈ. ಸುದರ್ಶನ ರಾವ್**

**ಪ್ರಶ್ನೆ: ಕುತ್ತಿಗೆ ಹಾಗೂ ಕಂಕುಳಲ್ಲಿ ಗಣಲೆಗಳು ಏಳಲು ಕಾರಣವೇನು? ಇದಕ್ಕೆ ಚಿಕಿತ್ಸೆ ಏನು?**

**ಉತ್ತರ :** ನಮ್ಮ ದೇಹವನ್ನು ಬ್ಯಾಕ್ಟೀರಿಯಾ, ವೈರಸ್ ಇತ್ಯಾದಿ ಮೀಣಿ ಜೀವಿಗಳಿಂದ ರಕ್ಷಿಸಿಕೊಳ್ಳಲು ಒಂದು ಸ್ವಯಂ ರಕ್ಷಣಾ ವ್ಯವಸ್ಥೆ ಇದೆ. ಇದನ್ನು ರೋಗ ನಿರೋಧಕ ವ್ಯವಸ್ಥೆ ಎನ್ನುವರು. 'ಗಣಲೆ', 'ದುಗ್ಧರಸ ಗ್ರಂಥಿ', 'Lymph nodes' ಎಂದೆಲ್ಲಾ ಕರೆಯಲ್ಪಡುವ ಈ ಅಂಗವು ನಮ್ಮ ದೇಹದ ರೋಗ ನಿರೋಧಕ ವ್ಯವಸ್ಥೆಯ ಒಂದು ಭಾಗವಾಗಿದೆ.

ನಮ್ಮ ದೇಹದ ಪ್ರತಿ ಅಂಗಕ್ಕೂ ಶುದ್ಧ ರಕ್ತ ತರುವ ನಾಳಗಳು ಹಾಗೂ ಅಶುದ್ಧ ರಕ್ತ ಒಯ್ಯುವ ನಾಳಗಳಿದ್ದಂತೆ ಅಲ್ಲಿನ ದುಗ್ಧರಸವೆಂಬ ಕಶ್ಮಲ ನೀರನ್ನು(Lymph) ಒಯ್ಯಲು ಒಂದು ನಾಳ ಸಮೂಹವಿದೆ. ಈ ನಾಳ ಸಮೂಹವನ್ನು ಲಿಂಫಾಟಿಕ್ ಸಿಸ್ಟಮ್ ಎಂದು ಕರೆಯುತ್ತೇವೆ. ಈ ನಾಳ ಸಮೂಹವು ದೇಹದ ಪ್ರತಿ ಇಂಚು ಭಾಗದಲ್ಲೂ ಇದೆ. ಉದಾಹರಣೆಗೆ ಕೈಗಳನ್ನೇ ತೆಗೆದುಕೊಳ್ಳುವುದಾದರೆ, ಬೆರಳಿನಿಂದ ಆರಂಭವಾಗುವ ದುಗ್ಧ ನಾಳ ಸಮೂಹವು ಅಂಗೈ, ಮೊಣಕೈ, ತೋಳಿಗೆ ಬಂದು ಕಂಕುಳನ್ನು ದಾಟಿ ಕುತ್ತಿಗೆಯ ಕಡೆಗೆ ಸಾಗುತ್ತದೆ. ಈ ದುಗ್ಧನಾಳ ಸಮೂಹದಲ್ಲಿ ನೂರಾರು ನಾಳಗಳಿದ್ದು ಒಂದನ್ನೊಂದು ಕೂಡಿಕೊಂಡು ಬಲೆಯನ್ನು ನೇಯ್ದಂತೆ ಕಾಣುತ್ತವೆ. ಈ ದುಗ್ಧನಾಳ ಸಮೂಹದ ಮಧ್ಯೆ ಮಧ್ಯೆ ಅಲ್ಲಲ್ಲಿ ದುಗ್ಧರಸ ಗ್ರಂಥಿಗಳಿರುತ್ತವೆ. ದುಗ್ಧರಸ ಗ್ರಂಥಿಗಳೆಂದರೆ ಒಂದು ಮಿಲಿ ಮೀಟರ್‌ನಿಂದ ಒಂದು ಸೆಂಟಿ ಮೀಟರ್‌ನಷ್ಟು ಗಾತ್ರವಿರಬಹುದಾದ ಗೋಳಾಕಾರದ ಮಾಂಸದ ರಚನೆಗಳು. ಈ ಗ್ರಂಥಿಗಳು ಮಾಮೂಲಿಯಾಗಿ ದೇಹದ ಅಸ್ಥಿಪಂಜರದಲ್ಲಿ ಕೀಲುಗಳು ಇರುವಂಥ ಭಾಗಕ್ಕೆ ಸಮಾನಾಂತರವಾಗಿ ಚರ್ಮದಡಿಯಲ್ಲಿ ಹುದುಗಿರುತ್ತವೆ. ಆರೋಗ್ಯವಂತ ದೇಹದಲ್ಲಿ ಈ ಗ್ರಂಥಿಗಳು ಇರಬಹುದಾದ ಜಾಗದಲ್ಲಿ ಒತ್ತಿ ನೋಡಿದರೂ ಅವುಗಳು ಕೈಗೆ ಸಿಗುವುದಿಲ್ಲ. ದುಗ್ಧರಸದಲ್ಲಿರುವ ಕಶ್ಮಲವನ್ನು ಸೋಸಿ ಅದರಲ್ಲಿರಬಹುದಾದ ಅಪಾಯಕಾರಿ ವಸ್ತು (ಉದಾ ಬ್ಯಾಕ್ಟೀರಿಯಾಗಳು)ಗಳನ್ನು ಕೊಲ್ಲುವುದು ಹಾಗೂ ಅವುಗಳ ವಿರುದ್ಧ ಹೋರಾಡಬಲ್ಲ ಪ್ರತಿರೋಧಕಗಳನ್ನು ಉತ್ಪಾದಿಸುವುದು ಈ ಗ್ರಂಥಿಗಳ ಕೆಲಸ. ಒಂದು ವೇಳೆ ದುಗ್ಧರಸದಲ್ಲಿ ಇಂತಹಾ ವಸ್ತುಗಳಿದ್ದರೆ ಅವುಗಳನ್ನು ನಾಶ ಮಾಡುವ ಪ್ರಕ್ರಿಯೆಯ ಮೊದಲನೆಯ ಹಂತವಾಗಿ ದುಗ್ಧರಸ ಗ್ರಂಥಿಗಳು ಗಾತ್ರದಲ್ಲಿ ಹಿಗ್ಗಿಕೊಂಡು ತಡವಿದರೆ ಕೈಗೆ ಸಿಗುತ್ತವೆ. ಕುತ್ತಿಗೆ ಕಂಕುಳು ಮತ್ತು ತೊಡೆ ಸಂಧಿಯಲ್ಲಿ ಒಂದರಿಂದ ಎರಡು ಸೆಂಟಿ ಮೀಟರ್ ಗಾತ್ರವಿದ್ದು, ದುಂಡಗೆಯೂ, ನುಣ್ಣಗಿನ ಮೇಲ್ಮೈ ಹೊಂದಿದ್ದು, ಸಾಲಿನಲ್ಲಿ ಎರಡು ಮೂರು ಇಂತಹ ಗುಳ್ಳೆಗಳು ಇದ್ದರೆ ಇವನ್ನು ಗಣಲೆಗಳಿರಬಹುದೆಂದು ಅನುಮಾನಿಸಬಹುದು.

ದೇಹದ ಯಾವುದೇ ಭಾಗದಲ್ಲಿ ಗಣಲೆಗಳು ದೊಡ್ಡದಾದರೆ ಆ ಭಾಗದಲ್ಲಿ ಬ್ಯಾಕ್ಟೀರಿಯಾ ಜೀವಿಗಳ ಆಕ್ರಮಣವಾಗಿರುವುದು ಅತ್ಯಂತ ಮಾಮೂಲಿ ಕಾರಣ. ಹೆಚ್ಚಾಗಿ ಮೀಣಿಜೀವಿಗಳು ಗಾಯದ ಮುಖಾಂತರ, ಮುಳ್ಳು, ಸೂಜಿ ಚುಚ್ಚಿಸಿಕೊಂಡಿರುವುದರ ಮೂಲಕ ಅಥವಾ ಕಜ್ಜಿ ತುರಿಕೆಗಳಿರುವ ಜಾಗದ ಮೂಲಕ ದೇಹವನ್ನು ಪ್ರವೇಶಿಸುತ್ತದೆ. ಒಂದು ವೇಳೆ ಹೆಚ್ಚು ಅಪಾಯಕಾರಿ ಅಲ್ಲದ ಬ್ಯಾಕ್ಟೀರಿಯಾಗಳಿಂದ ಗಣಲೆ ಎದ್ದಿದ್ದರೆ ಅದು ತನ್ನಿಂತಾನಾಗಿ ಅಥವಾ ಆಂಟಿಬಯಾಟಿಕ್‌ಗಳೆಂಬ ಔಷಧಿಗಳನ್ನು ತೆಗೆದುಕೊಂಡರೆ ಒಂದು ವಾರದ ಅವಧಿಯಲ್ಲಿ ಸುಲಭವಾಗಿ ಗುಣವಾಗುತ್ತದೆ. ಆದರೆ ಕೆಲವೊಮ್ಮೆ ಇತರ ಅಪಾಯಕಾರಿ ಬ್ಯಾಕ್ಟೀರಿಯಾಗಳೋ, ಕ್ಷಯರೋಗದ ಬ್ಯಾಕ್ಟೀರಿಯಾಗಳೋ, ವೈರಸ್‌ಗಳೊ, ಆನೆಕಾಲು ರೋಗ ತರುವಂತಹಾ ಜಂತುಗಳೋ ದೇಹವನ್ನು ಪ್ರವೇಶಿಸಿದಾಗ ಅವುಗಳಿಂದ ನಮ್ಮ ದೇಹವನ್ನು ರಕ್ಷಿಸಲು ದುಗ್ಧರಸ ಗ್ರಂಥಿಗಳು ದೊಡ್ಡದಾಗುತ್ತವೆ. ಇಂತಹ ಸಂದರ್ಭದಲ್ಲಿ ಆ ಕ್ರಿಮಿಗಳನ್ನು ಕೊಲ್ಲುವಂತಹಾ ಔಷಧಿಗಳನ್ನು ಬಳಸದಿದ್ದರೆ ಈ ಮೀಣಿ ಜೀವಿಗಳದ್ದೇ ಕೈ ಮೇಲಾಗುವ ಅಪಾಯವಿರುತ್ತದೆ.

ಕ್ಯಾನ್ಸರ್‌ನಿಂದಾಗಿ ಗಣಲೆಗಳೇಳುವುದು ಇನ್ನೊಂದು ಸಾಮಾನ್ಯ ಕಾರಣ. ರಕ್ತದ ಕ್ಯಾನ್ಸರ್‌ನಲ್ಲಿ ದೇಹದ ವಿವಿಧ ಭಾಗಗಳಲ್ಲಿ ಗಣಲೆಗಳೆದ್ದಿರುತ್ತದೆ. ಲಿಂಫೋಮಾ ಎಂಬುದು ರೋಗನಿರೋಧಕ ವ್ಯವಸ್ಥೆಯಲ್ಲಿ ಬೆಳೆಯುವ ಇನ್ನೊಂದು ತರಹದ ಕ್ಯಾನ್ಸರ್. ಈ ಖಾಯಿಲೆಯಲ್ಲೂ ದೇಹದ ವಿವಿಧ ಭಾಗಗಳಲ್ಲಿ ಗಣಲೆಗಳೆದ್ದಿರುತ್ತದೆ. ಇನ್ನು ಕೆಲವೊಮ್ಮೆ ದೇಹದ ಯಾವುದಾದರೊಂದು ಅಂಗದಲ್ಲಿ ಕ್ಯಾನ್ಸರ್ ಇದ್ದಾಗ ಆ ಅಂಗದ ದುಗ್ಧರಸವನ್ನು ಸೋಸುವ ದುಗ್ಧರಸ ಗ್ರಂಥಿಗಳಲ್ಲಿ ಕ್ಯಾನ್ಸರ್ ಹರಡಿ ಅವುಗಳು ದೊಡ್ಡದಾಗುವುದೂ ಇದೆ. ಕೆಲವೊಮ್ಮೆ ಕ್ಯಾನ್ಸರ್ ಇದ್ದಿರುವುದನ್ನು ಈ ಗಣಲೆಗಳನ್ನು ಕಂಡ ಬಳಿಕವೇ ತಿಳಿಯುವುದುಂಟು.

ಗಣಲೆಗಳು ಸ್ವತಹ ಖಾಯಿಲೆಯಲ್ಲ, ಗಣಲೆಗಳು ಎದ್ದಿರಬಹುದಾದ ಕಾರಣವೇ ನಿಜವಾದ ಖಾಯಿಲೆ. ಹಾಗಾಗಿ ಗಣಲೆ ಏಳಲು ಕಾರಣವೇನೆಂದು ತಪಾಸಣೆ ನಡೆಸಿ, ಕಾಯಿಲೆ ಪತ್ತೆ ಹಚ್ಚಿ, ಆ ಕಾಯಿಲೆಗೆ ಸೂಕ್ತ ಚಿಕಿತ್ಸೆ ನಡೆಸಬೇಕು. ಗಣಲೆಯೊಂದನ್ನು ಸಣ್ಣ ಶಸ್ತ್ರಚಿಕಿತ್ಸೆ ಮೂಲಕ ತೆಗೆದು ಬಯಾಪ್ಸಿ ಎಂಬ ತಪಾಸಣೆ ಮಾಡುವುದರ ಮೂಲಕ ನಿಜವಾದ ಖಾಯಿಲೆಯನ್ನು ನಿಖರವಾಗಿ ಪತ್ತೆ ಹಚ್ಚುವ ಒಂದು ಸುಲಭೋಪಾಯವನ್ನು ಸಾಮಾನ್ಯವಾಗಿ ಇಂತಹ ಕೇಸುಗಳಲ್ಲಿ ಕೊನೆಯ ಅಸ್ತ್ರವಾಗಿ ವೈದ್ಯರು ಬಳಸುತ್ತಾರೆ.

**ಆರೋಗ್ಯ ಮಾಹಿತಿಯ ಬಗ್ಗೆ ಪ್ರಶ್ನೆಗಳನ್ನು ಎಸ್.ಎಮ್.ಎಸ್.ಮೂಲಕವೂ ತಿಳಿಸಬಹುದು. ಸಂಚಾರಿ ದೂರವಾಣಿ ನಂ. : 98451 36322**

### ತುಲಾ ಮಾಸ ವಿಶೇಷ ದಿನಗಳು

| | |
|---|---|
| 17-10-2010 | ತುಲಾ ಸಂಕ್ರಮಣ<br>ವಿಜಯದಶಮಿ |
| 18-10-2010 | ಸರ್ವೇಕಾದಶೀ |
| 20-10-2010 | ಪ್ರದೋಷಃ |
| 23-10-2010 | ಪೂರ್ಣಿಮಾ |
| 24-10-2010 | ಮಹಾನಕ್ಷತ್ರ, ಸ್ವಾತೀ ಪ್ರಾರಂಭ |
| 26-10-2010 | ಸಂಕಷ್ಟಹರ ಚತುರ್ಥಿ<br>ಚಂದ್ರೋದಯ ಘಂಟೆ ರಾತ್ರಿ, 8-31ಕ್ಕೆ |
| 02-11-2010 | ಸರ್ವೇಕಾದಶೀ |
| 03-11-2010 | ಪ್ರದೋಷಃ |
| 04-11-2010 | ಜಲಪೂರಣಂ |
| 05-11-2010 | ತೈಲಾಭ್ಯಂಜನ, ದೀಪಾವಳಿ<br>ಬಲೀಂದ್ರ ಪೂಜಾ |
| 06-11-2010 | ಅಮಾವಾಸ್ಯಾ, ಗೋಪೂಜಾ<br>ಮಹಾನಕ್ಷತ್ರ<br>ವಿಶಾಖಾ ಪ್ರಾರಂಭ |
| 07-11-2010 | ಕಾರ್ತಿಕ ಮಾಸ ಪ್ರಾರಂಭ |
| 16-11-2010 | ವೃಶ್ಚಿಕ ಸಂಕ್ರಮಣ |

ಮಂಗಳೂರು ಶ್ರೀಸುಬ್ರಹ್ಮಣ್ಯ ಸಭಾದಲ್ಲಿ ವರ್ಷಂಪ್ರತಿಯಂತೆ ಈ ಬಾರಿ **ತಾ.24-10-2010** ಆದಿತ್ಯವಾದಂದು ''ನಾಡಹಬ್ಬ''ವನ್ನು ವಿವಿಧ **ಕಾರ್ಯಕ್ರಮಗಳೊಂದಿಗೆ ಆಚರಿಸಲಾಗುವುದು ಎಂದು ಸಂಘದ ಪ್ರಕಟಣೆ ತಿಳಿಸಿದೆ.**

**ಕಾರ್ಯಕ್ರಮಗಳು**

| | |
|---|---|
| ಬೆಳಿಗ್ಗೆ 9-30ರಿಂದ | : ಲಲಿತ ಸಹಸ್ರನಾಮ ಪಾರಾಯಣ |
| 10-00ರಿಂದ 10-30 | : **ಛದ್ಮವೇಷ ಸ್ಪರ್ಧೆ** (1ರಿಂದ 5 ವರ್ಷದೊಳಗಿನ ವಿಭಾಗ) |
| 10-30ರಿಂದ 11-00 | : **ಛದ್ಮವೇಷ ಸ್ಪರ್ಧೆ** (6ರಿಂದ 10 ವರ್ಷದೊಳಗಿನ ವಿಭಾಗ) |
| 11-00ರಿಂದ 11-30 | : **ಛದ್ಮವೇಷ ಸ್ಪರ್ಧೆ** (16 ವರ್ಷದಿಂದ ಮೇಲ್ಪಟ್ಟವರಿಗೆ) |
| 11-30ರಿಂದ 12-30 | : **ಭಕ್ತಿಗೀತೆ** (10 ವರ್ಷದ ಕೆಳಗಿನವರಿಗೆ 10ರಿಂದ 16 ವರ್ಷದವರೆಗೆ), **ಹೂಕಟ್ಟುವ ಸ್ಪರ್ಧೆ-ಮುಕ್ತ** |
| 12-00ರಿಂದ 1-00 | : **ಚಿತ್ರ ಬಿಡಿಸುವ ಸ್ಪರ್ಧೆ** (ವಿಭಾಗ 1ರಿಂದ 5ನೇ ತರಗತಿ, ವಿಭಾಗ 6ರಿಂದ 10ನೇ ತರಗತಿ) |
| 12-00ರಿಂದ 12-30 | : **ಹುಲಿಕುಣಿತ ಸ್ಪರ್ಧೆ** (16 ವರ್ಷದವರಿಂದ ಮೇಲ್ಪಟ್ಟವರಿಗೆ ಮಾತ್ರ) ಅವಧಿ ಕೇವಲ 3 ನಿಮಿಷ |
| 12-30ರಿಂದ 1-00 | : **ಪ್ರತಿಭಾ ಪುರಸ್ಕಾರ-ದಿ| ಭಾಗೀರಥಿ ದಾಮೋದರ ಶಾಸ್ತ್ರಿಪ್ರತಿಷ್ಠಾನ** ಕುಳ್ಯಾ ಇವರಿಂದ, ನಿರ್ವಹಣೆ ಶ್ರೀ ಕೆ. ಸದಾಶಿವ ಶಾಸ್ತ್ರಿ |
| ಮಧ್ಯಾಹ್ನ 1-00ರಿಂದ | : **ಭೋಜನ** |
| 2-00ರಿಂದ | : **ಸಾಂಸ್ಕೃತಿಕ ಕಾರ್ಯಕ್ರಮಗಳು** ಸಮಾಜದ ಪ್ರತಿಭೆಗಳಿಂದ |
| 2-30ರಿಂದ | : ಯಕ್ಷಗಾನ ''ಸುಬ್ರಹ್ಮಣ್ಯ ವಿಜಯ'' ಶ್ರೀ ಸುಬ್ರಹ್ಮಣ್ಯ ಸಭಾ ಯಕ್ಷಗಾನ ಮಂಡಳಿಯ ಸದಸ್ಯರಿಂದ |

ವಿ.ಸೂ. : ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಭಾಗವಹಿಸಲಿಚ್ಛಿಸುವವರು ತಮ್ಮ ಹೆಸರನ್ನು 15-10-2010ರ ಒಳಗಾಗಿ ನೋಂದಾಯಿಸಬೇಕು. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ : ಶ್ರೀಮತಿ ಅರುಣಾ ಸೋಮಶೇಖರ್ (9880413243), ಶ್ರೀ ಶ್ರೀಕಾಂತ್ ರಾವ್ (9343361618), ಶ್ರೀ ಅನಿಲ್‌ರಾವ್ ಬಿ.ಎಸ್. (9880037110)

## ಶ್ರೀ ಅನ್ನಪೂರ್ಣೇಶ್ವರೀ ದೇವಸ್ಥಾನ

**ಮುಲ್ಲಡ್ಕ, ಅಂಚೆ ಮುಂಡ್ಕೂರು, ಕಾರ್ಕಳ ತಾಲೂಕು.**

ಭಕ್ತ ಮಹಾಜನರೇ,

ಸ್ವಸ್ತಿ! ಶ್ರೀ ಶಾಲಿವಾಹನ ವರ್ಷ 1932ನೇ ವಿಕೃತಿ ನಾಮ ಸಂವತ್ಸರದ ಆಶ್ವಯುಜ ಪಾಡ್ಯದಿಂದ ನವಮಿ ಪರ್ಯಂತ **ದಿನಾಂಕ 08-10-2010ರಿಂದ ದಿನಾಂಕ 16-10-2010ರ ವರೆಗೆ ವರ್ಷಂಪ್ರತಿ ನಡೆಯುವ**

**ನವರಾತ್ರಿ ಮಹೋತ್ಸವವು** ಜರಗಲಿರುವುದು.

ತಾವೆಲ್ಲರೂ ಬಂದು ಭಾಗವಹಿಸಿ, ತನು-ಮನ-ಧನಗಳಿಂದ ಸಹಕರಿಸಿ, ಶ್ರೀ ದೇವರ ಗಂಧ ಪ್ರಸಾದವನ್ನು ಸ್ವೀಕರಿಸಿ, ಶ್ರೀ ಅನ್ನಪೂರ್ಣೇಶ್ವರೀ ದೇವರ ವಿಶೇಷ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿಸುವ,

**- ಆಡಳಿತ ಮೊಕ್ತೇಸರರು**

## ಬಳ್ಪ ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನ

**ಬಳ್ಪ, ಸುಳ್ಯ ತಾಲೂಕು, ದ.ಕ. ಜಿಲ್ಲೆ**

ಬಳ್ಪ ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದಲ್ಲಿ **ಸಾಮೂಹಿಕ ದುರ್ಗಾನಮಸ್ಕಾರ ಪೂಜೆ**ಯು ತಾ.12-11-2010ರ ಶುಕ್ರವಾರದಂದು ರಾತ್ರಿ 8-00 ಗಂಟೆಗೆ ನಡೆಯಲಿದೆ. ಭಕ್ತಾದಿಗಳು ಈ ಬಗ್ಗೆ ರೂ.75/-ನ್ನು ಪಾವತಿಸಿ ಸೇವೆ ಸಲ್ಲಿಸಬಹುದು.

- ಆಡಳಿತ ಮೊಕ್ತೇಸರರು,
ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನ. ಬಳ್ಪ


**Buying and selling shares as easy as checking your emails**

**Sharekhan Online Trading Account Features:**

- Your bank account gets directly linked to trading account
- Can do direct fund transfer from any of 11 leading banks
- Choose your trading account, Classic, FastTrade, TradeTiger
- Apply online for Stocks, Mutual Funds and IPO's

**Contact : Pradeep Rao K.**
**Tel : 0824 2412903, 9448191028**
**Navadurga Share Services**
**Email : navdurga@bp.sharekhan.com**

Sharekhan
YOUR GUIDE TO THE FINANCIAL JUNGLE

Visit : www.sharekhan.com

Sharekhan Ltd.: BSE Cash-INB011073351; F&O-INF011073351; CD-INE011073351; NSE - INB/ INF231073330; CD - INE231073330; MCX Stock Exchange : CD - INE261073330 DP: NSDL-IN-DP-NSDL-233-2003; CDSL -IN-DP-CDSL- 271-2004; PMS INP000000662; Mutual Fund: ARN 20669. Sharekhan Commodities Pvt.Ltd.: MCX- 10080(MCX/TCL/CORP/0425); NCDEX -00132; (NCDEX/TCM/CORP/0142); for any complaints email at igc@sharekhan.com. Regd Add:- A-206, Phoenix House, Phoenix Mills Compound, Senapati Bapat Marg, Lower Parel, Mumbai- 400013.Investing in equities & commodities future involves risk. Please carefully read the risk disclosure document as prescribed by SEBI & relevant exchanges and Do 's & Don'ts by NCDEX. (Subbroker Regn.Nos: BSE: INS010606122;NSE: INS23106924)


## ಶ್ರೀಶಾರದಾ ದೇವಸ್ಥಾನ, ಶಾರದಾನಗರ, ಕುಂಜಿಬೆಟ್ಟು , ಉಡುಪಿ

**ಈ ತಿಂಗಳ ಕಾರ್ಯಕ್ರಮಗಳು**

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 3-30ರಿಂದ 8-00)**

| | |
|---|---|
| ಮಂಗಳಾರತಿ | : ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 8-00 ಗಂಟೆಗೆ |
| ಪ್ರತಿ ಬುಧವಾರ | : **''ಸೌಂದರ್ಯಲಹರಿ ಪಾರಾಯಣ''** ಸಂಜೆ 5-00 ಗಂಟೆಯಿಂದ (ಮಹಿಳಾ ವಿಭಾಗದಿಂದ) |
| ಪ್ರತಿ ಶುಕ್ರವಾರ | : **ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ** ಸಂಜೆ 5-00 ಗಂಟೆಯಿಂದ (ಮಹಿಳಾ ವಿಭಾಗದಿಂದ) |
| ಪ್ರತಿ ಆದಿತ್ಯವಾರ | : ಸ್ವಾಧ್ಯಾಯ ಸಮಿತಿಯವರಿಂದ **''ಪಾರಾಯಣ''** ಸಂಜೆ ಗಂಟೆ 4-30ರಿಂದ |

**ಸಂಕಷ್ಟಹರ ಚತುರ್ಥಿಯಂದು (ತಾ.26-10-2010) ''ಸಾಮೂಹಿಕ ಗಣಹೋಮ'' ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.51/-)**

2ನೇ ಶನಿವಾರ : **ತಾ.13-11-2010 ''ಗಮಕವಾಚನ'' ಸಂಜೆ ಗಂಟೆ 5-00ರಿಂದ (ಶ್ರೀ ನೀಲಾವರ ಲಕ್ಷ್ಮೀನಾರಾಯಣ ರಾವ್ ಹಾಗೂ ಶ್ರೀ ಬಾರ್ಕೂರು ನಾಗೇಶ ರಾವ್‌ರವರಿಂದ)**

**ತಾ.17-10-2010 ''ವಿಜಯದಶಮಿ'', 'ಶ್ರೀಚಂಡಿಕಾಯಾಗ ಮತ್ತು ಶ್ರೀಶಾರದಾ ಪೂಜೆ'**

**ಶುದ್ಧ ಪಂಚಮಿಯಂದು (ತಾ.28-10-2010) ''ನಾಗದೇವರಿಗೆ ತನುಸೇವೆ'' ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ**

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**

## ವಧೂ-ವರರ ವೇದಿಕೆ

**ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಶಾರದಾನಗರ, ಕುಂಜಿಬೆಟ್ಟು, ಉಡುಪಿ.**

ಸಮಾಜದ ವಿವಾಹ ಯೋಗ್ಯ ವಧೂ-ವರರ ನೋಂದಣಿ, ವಿವಿಧ ಮಾಹಿತಿ ಮೊದಲಾದವುಗಳನ್ನು ಆಸಕ್ತ ಹೆತ್ತವರು ಪಡೆದುಕೊಂಡು ಪರಸ್ಪರ ವಿಚಾರ ವಿನಿಮಯ ಮಾಡಲು ಅವಕಾಶವಿದೆ. ಸಮಾಜ ಬಾಂಧವರು ವೇದಿಕೆಯ ಸದುಪಯೋಗ ಪಡೆದುಕೊಳ್ಳಬೇಕಾಗಿ ವಿನಂತಿ.

**- ಅಧ್ಯಕ್ಷರು, ವಧೂವರರ ವೇದಿಕೆ, ಶ್ರೀಶಾರದಾ ಮಂಟಪ, ಕುಂಜಿಬೆಟ್ಟು, ಉಡುಪಿ-2**

## ವೈದ್ಯಕೀಯ ನೆರವು ವೇದಿಕೆ

**ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಶಾರದಾ ನಗರ, ಕುಂಜಿಬೆಟ್ಟು , ಉಡುಪಿ**

ನೆರವಿನ ಅಗತ್ಯವುಳ್ಳ ನಮ್ಮ ಸಮಾಜ ಬಾಂಧವರು ಅರ್ಜಿ ಕಳುಹಿಸಬೇಕಾದ ವಿಳಾಸ : ಕಾರ್ಯದರ್ಶಿ, ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ, ಶ್ರೀಶಾರದಾ ಮಂಟಪ, ಕುಂಜಿಬೆಟ್ಟು, ಉಡುಪಿ-576102.

ವೈದ್ಯಕೀಯ ನೆರವು ವೇದಿಕೆಯ ಮಹದುದ್ದೇಶದ ಯೋಜನೆಯನ್ನು ಯಶಸ್ವಿಯಾಗಿಯೂ, ನಿರಂತರವಾಗಿಯೂ ನಡೆಸುವಂತಾಗಲು ಸಮಾಜ ಬಾಂಧವರು ದೇಣಿಗೆಗಳನ್ನು ''ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ, ಕುಂಜಿಬೆಟ್ಟು ಉಳಿತಾಯ ಖಾತೆ ನಂ.220/2928 ಸಿಂಡಿಕೇಟ್ ಬ್ಯಾಂಕ್, ರಥಬೀದಿ ಬ್ರಾಂಚ್'' ಈ ಹೆಸರಿನಲ್ಲಿ ಚೆಕ್ ಅಥವಾ ಡಿ.ಡಿ. ರೂಪದಲ್ಲಿ ಕಾರ್ಯದರ್ಶಿ, ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ, ಶ್ರೀಶಾರದಾ ಮಂಟಪ, ಕುಂಜಿಬೆಟ್ಟು, ಉಡುಪಿ-576 102 : ಈ ವಿಳಾಸಕ್ಕೆ ಕಳುಹಿಸಬೇಕಾಗಿ ವಿನಂತಿ.

**- ಅಧ್ಯಕ್ಷರು ಮತ್ತು ಸಂಚಾಲಕರು, ವೈದ್ಯಕೀಯ ನೆರವು ವೇದಿಕೆ**


**PRAMOD**
AUTOMOBILES
KARANGALPADY, MANGALORE -575 003.

Ph : 2491723 (O)
2493633 (H.O.)
2212723 (R)

: Wholesale & Retail Dealers in :
2 & 3 WHEELERS SPARES & ACCESSORIES

Prop. :Ln.K. HARSHA KUMAR

**ರಾಮಾ ಅಟೋಮೊಬೈಲ್ಸ್**

ಮಾರುತಿ ವಾಹನ ತಜ್ಞರು

ಮಲೆಮಾರ್ ರಸ್ತೆ, ಕೊಟ್ಟಾರ ಚೌಕಿ, ಮಂಗಳೂರು - 575 006.

**ಫೋನ್ : 2454355, ಮೊಬೈಲ್ : 94485 45702**



ಪ್ರೊ : ಯು. ಸಂತೋಷ ಕುಮಾರ್, ಉಜ್ಜೋಡಿ





Owned & Published by : B. Krishnamoorthy Rao, Ambalpady - Secretary Sthanika Dravida Brahmana Sangha (R.), Shri Sharada Mantapa, Kunjibettu, Udupi - 576 102. Ph : 0820-2520754
Edited by Y. Mohan Rao, Designed @ SriNidhi Computer Graphics, Bailur, Udupi, Printed at Agrahara Offsets, Udupi - 576 101. E-mail : srisharadaudupi@yahoo.co.in Website : www.srisharada.org